ತ್ತದೆ. ತಾವು ಏತಕ್ಕೆ ರಾಜೀನಾಮೆ ಕೊಡಬೇಕಾಯಿತು ಎಂಬುದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ನೀರಾವರಿ ಯೋಜನೆಗಳಿಗಾಗಲೀ ಲೋಕ ಉಪಯೋಗ ಅಂದರೆ ಲೋಕೋಪಯೋಗಿ ಇಲಾಖೆಯ ಯೋಜನೆಗಳಿಗಾಗಲೀ ಎಷ್ಟು ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟನ್ನು ಒದಗಿಸದಿದ್ದ ಕಾರಣ ತಾವು ರಾಜೀನಾಮೆ ಕೊಡಬೇಕಾಗಿ ಬಂತು ಎಂದು ಅವರು ಹೇಳಿದ್ದಾರೆ, ಯಾರು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳ ಮಂತ್ರಿಗಳಾಗಿ ಕೆಲಸ ಮಾಡುತ್ತಾರೆ, ಅವರಿಗೆ ಯಾವ ಸ್ವಾತಂತ್ರ್ಯವೂ ಇಲ್ಲ ಎಂಬುದು ಇದರಿಂದ ಸ್ಪಷ್ಟವಾಗಿ ತಿಳಿಯುತ್ತದೆ, ಮತ್ತೆ ಎರಡನೆಯದಾಗಿ, ಈ ಕೆಲಸಕಾರ್ಯಗಳಿಗೆ ಬಜೆಟ್‌ನಲ್ಲಿ ಏನು ಹಣವನ್ನು ಒದಗಿಸಲಾಗಿದೆ, ಆ ಹಣವನ್ನು ಬಿಡುಗಡೆ ಮಾಡಿದ ಮೇಲೆ ಯಾರಿಗೆ ಕೀರ್ತಿ ಬರುತ್ತದೆ, ಯಾರಿಗೆ ಬರುವುದಿಲ್ಲ ಎಂಬುದನ್ನು ಆರ್ಥಿಕ ಇಲಾಖೆಯನ್ನು ನೋಡಿಕೊಳ್ಳುತ್ತಿರುವ ಮುಖ್ಯಮಂತ್ರಿಗಳು ಯೋಚನೆ ಮಾಡಿ ಹಣ ಬಿಡುಗಡೆ ಮಾಡಬಹುದೆಂದು ಕಾಣುತ್ತದೆ. ಕಳೆದ ಅಧಿವೇಶನದಲ್ಲಿ ನಾವೆಲ್ಲರೂ ಸೇರಿಕೊಂಡು ಒಂದು ನಿರ್ಣಯವನ್ನು ಪಾಸ್ ಮಾಡಿದೆವು ಏನೆಂದರೆ ಕೃಷ್ಣಾ ಮತ್ತು ಕಾವೇರಿ ಬೇಸಿನ್ ಯೋಜನೆಗಳಿಗೆ ವರ್ಷಕ್ಕೆ ೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಈ ನಿರ್ಣಯವನ್ನು ಇಲ್ಲಿ ಎಲ್ಲರೂ ಒಕ್ಕೊರಲಿನಿಂದ ಒಪ್ಪಿಕೊಂಡೆವು. ನಂತರ ಸರ್ಕಾರ ಈ ನಿರ್ಣಯದ ಪ್ರಕಾರ ಹಣ ಖರ್ಚು ಮಾಡಬೇಕಾಗಿತ್ತು. ಅದು ಸರ್ಕಾರದ ಜವಾಬ್ದಾರಿ ಆಗಿತ್ತು, ಆದರೆ ಅದರಂತೆ ಮಾಡಲಿಲ್ಲ. ಇಷ್ಟು ಹಣವನ್ನು ಖರ್ಚು ಮಾಡಲು ಸಾಧ್ಯವೇ ಅಥವಾ ಇಲ್ಲವೇ ಎಂಬುದನ್ನು ಸರ್ಕಾರ ಈ ನಿರ್ಣಯವನ್ನು ಇಲ್ಲಿ ಪಾಸ್ ಮಾಡುವುದಕ್ಕೆ ಮೊದಲೇ ಯೋಚನೆ ಮಾಡಬೇಕಾಗಿತ್ತು, ಈ ಬಗ್ಗೆ ಸರ್ಕಾರಕ್ಕೆ ವಿವೇಚನೆ ಇರಬೇಕಾಗಿತ್ತು, ಆಲೋಚನೆ ಮಾಡಿ ನಂತರ ನಿರ್ಣಯವನ್ನು ಒಪ್ಪಿಕೊಳ್ಳಬೇಕಾಗಿತ್ತು, ಆದರೆ ಆ ರೀತಿ ಮಾಡದೆ ಸರ್ಕಾರ ಈ ಸದನವನ್ನು ತಪ್ಪುದಾರಿಗೆ ಎಳೆದಿದೆ. ಈ ಸರ್ಕಾರ ಇಲ್ಲಿ ಮಾತು ಕೊಟ್ಟಂತೆ ನಡೆದುಕೊಳ್ಳುವುದಿಲ್ಲ, ಆಡಿದಂತೆ ಮಾಡುವುದಿಲ್ಲವೆಂಬುದು ಇದರಿಂದ ಅರ್ಥವಾಗುತ್ತದೆ. ಆಯವ್ಯಯ ಪಟ್ಟಿಯಲ್ಲಿ ಒದಗಿಸಿದ ಹಣವನ್ನು ಖರ್ಚು ಮಾಡಲು ಈ ಸದನ ಮಂಜೂರಾತಿ ಕೊಟ್ಟಮೇಲೂ ಸಹ ಆ ಹಣವನ್ನು ಖರ್ಚು ಮಾಡತಕ್ಕಂಥ ಮನಸ್ಸು ಈ ಸರ್ಕಾರಕ್ಕೆ ಇಲ್ಲ. ನಾವು ಹಣವನ್ನು ಖರ್ಚು ಮಾಡಲು ಏಪ್ರಿಲ್ ತಿಂಗಳಲ್ಲಿ ಸರ್ಕಾರಕ್ಕೆ ಈ ಸದನದ ಮೂಲಕ ಮಂಜೂರಾತಿ ನೀಡಿದರೂ ಸಹ ಸರ್ಕಾರ ಮಾತ್ರ ಡಿಸೆಂಬರ್ ತಿಂಗಳವರೆಗೆ ಹಣ ಬಿಡುಗಡೆ ಮಾಡಿಲ್ಲ. ಕಾಮಗಾರಿ ಕೆಲಸಗಳನ್ನು ಮುಗಿಸುವ ಬಗ್ಗೆ ಸರ್ಕಾರದಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಬೇಕಾದ ನಿರ್ದೇಶನವನ್ನು ಸಕಾಲದಲ್ಲಿ ಕೊಡದಿದ್ದರೆ, ಆ ಬಗ್ಗೆ ಮನಸ್ಸು ಮಾಡದಿದ್ದರೆ ನಾವು ಇಲ್ಲಿ ಸದಸ್ಯರಾಗಿ ಇಷ್ಟೆಲ್ಲಾ ಏತಕ್ಕೆ ಮಾತನಾಡಬೇಕು ? ಇವರ ಅಧಿಕಾರವರ್ಗ ಏನಿದೆ, ಆ ವರ್ಗವನ್ನು ಇವರು ತಮ್ಮ ಹತೋಟಿಯಲ್ಲಿಟ್ಟುಕೊಂಡು ಕೆಲಸ ಮಾಡಿಸಬೇಕು ಮತ್ತು ಇವರು ಸಹ ಸತ್ಯಸಂಧರಾಗಿರಬೇಕು ಇಲ್ಲದಿದ್ದರೆ ನಾವು ಇಲ್ಲಿ ಮಾತನಾಡಿ ಏನು ಪ್ರಯೋಜನ? ಹಾಗೆ ಮಾಡಿದರೆ ನಮಗೆ ಪ್ರೀತಿ ಬರುತ್ತದೆ, ನೀವು ಅದರ ಬಗ್ಗೆ ಗಮನ ಕೊಡ ವುದಿಲ್ಲ ಹೇಳುವುದು ಒಂದು ಮಾಡುವುದು ಒಂದು ಹೇಗಾದರೂ ಮಾಡಿ ಹಣ ಉಳಿಸಿಕೊಳ್ಳತಕ್ಕಂತಹ ವ್ಯವಸ್ಥೆ ನಿಮ್ಮದು. ಈ ಸರ್ಕಾರದಲ್ಲಿ ಹಣದ ಕೊರತೆ ಎಷ್ಟು ಇದೆ ಎಂಬುದಕ್ಕೆ ನಿಮಗೆ ಒಂದು ನಿದರ್ಶನವನ್ನು ಕೊಡುತ್ತೇನೆ. I refer to the Picture of Karnataka Budget 1987–88, Page No. 30. ಇದರಲ್ಲಿ ಸಾಲಸೋಲಗಳ ಬಗ್ಗೆ ಹೇಳಿದ್ದಾರೆ. This is the consolidated statement of Borrowings of the State Government Outstanding as on 31st March. 1) the internal debts 2) Loans and Advances from Central Government 3) Provident Fund Advances totalling to Rs. 322872.22 000 ನಿಮ್ಮ ಆದಾಯದಲ್ಲಿ ಅರ್ಧ ಭಾಗದಷ್ಟು ಡೆಟ್ ಸರ್ವಿಸ್ ಛಾರ್ಜಸ್ ನೀವು ಕೊಡಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನೀವು ಸರ್ಕಾರವನ್ನು ಯಾವ ರೀತಿ ನಡೆಸುತ್ತೀರಿ ಎಂದು ಆಲೋಚನೆ ಮಾಡಬೇಕು. ಈ ಡೇಟ್ ಸರ್ವಿಸ್ ಛಾರ್ಜ್ ಅನ್ನು ಕೊಡುವುದಕ್ಕೆ ನಿಮಗೆ ಆದಾಯ ಏನು ಇದೆ ಎಂಬುದರ ಬಗ್ಗೆ ನಾವು ಆಯವ್ಯಯ ಭಾಷಣದಲ್ಲಿ ದೀರ್ಘವಾಗಿ ಮಾತನಾಡಿದ್ದೇವೆ ನೀವು ಡೆಟ್ ಸರ್ವಿಸ್ ಛಾರ್ಜಸ್ ಕೊಡಬೇಕು, ಆದಾಯ ಉತ್ಪತ್ತಿ ಮಾಡಬೇಕು. ಇಂಟರ್‌ನಲ್ ರಿಸೋರ್ಸಸ್ ರೂಢಿಸಿಕೊಂಡು ಆಗ ಸರ್ಕಾರ ನಡೆಸಬೇಕು. ಅದಕ್ಕೆ ನೀವು ಗಮನಕೊಟ್ಟಿಲ್ಲ ಬಾಕಿಯನ್ನು ವಸೂಲು ಮಾಡುವ ಪ್ರಯತ್ನ ಮಾಡಿಲ್ಲ. ಸಾಲಸೋಲಗಳನ್ನು ನೀವು ಕೊಡಲೇಬೇಕಾಗುತ್ತದೆ. ಕೊಡದಿದ್ದರೆ, ನಿಮಗೆ ಬ್ಯಾಂಕ್‌ಗಳಿಂದ ಹಣದ ವ್ಯವಸ್ಥೆ ಮಾಡುವುದಿಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನೀವು ಸರ್ಕಾರ ನಡೆಸುವಾಗ, ಈ ಬಜೆಟ್ಟಿನ ಅವಶ್ಯಕತೆ ಏನು ಇದೆ ಎಂಬುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ನಿಮ್ಮ ಪಿ.ಡಬ್ಲ್ಯು.ಡಿ.

ಇಲಾಖೆಯ ಬಗ್ಗೆ ನನಗೆ ಅರ್ಥವಾಗುವ ರೀತಿಯಲ್ಲಿ ನಾನು ಹೇಳುತ್ತೇನೆ. ಶ್ರೀಮಾನ್ ಸಿ. ವಿ. ರಾಜಗೋಪಾಲ್ ಚಾರಿಯವರು, ಒಂದು ಮಾತನ್ನು ಹೇಳುತ್ತಿದ್ದರು ಅದೇನೆಂದರೆ, "Public Works Department is the enemy No. 1 of the public." ಆಗ ನನಗೆ ಅದು ಅರ್ಥವಾಗಲಿಲ್ಲ, ನಂತರ ನನಗೂ ವಯಸ್ಸಾಯಿತು ಕೆಲವು ವರ್ಷಗಳ ಕಾಲ ನಾನು ಮಂತ್ರಿಯಾಗಿದ್ದೆ ನನಗೆ ಪಿ ಡಬ್ಲ್ಯು ಡಿ ಇಲಾಖೆಯ ಬಗ್ಗೆ ಏನು ಅನ್ನಿಸುತ್ತದೆ ಎಂದರೆ, Public Works Department is the Public Co-operative Bank Limited consisting of members of Contractors, Engineers and Politicians for enriching themselves for enjoying themselves, for looting the public funds. ನನ್ನ ಜೀವನದಲ್ಲಿ ಮಂತ್ರಿಯಾಗಿ, ಸಾರ್ವಜನಿಕ ಜೀವನದಲ್ಲಿ ಬಹಳ ಕಾಲ ಕಳೆದಿದ್ದೇನೆ. ಈ ಪಿಡಬ್ಲ್ಯುಡಿ ಇಲಾಖೆಯಲ್ಲಿ ಹಾಗೂ ನೀರಾವರಿ ಇಲಾಖೆಯಲ್ಲಿ ಅಧಿಕಾರಿಗಳು ನಡೆಸತಕ್ಕ ಜೀವನ, ಅವರ ಮೋಜು, ಅವರು ಲೂಟಿ ಮಾಡತಕ್ಕ ಹಣ, ಅವರು ರಾಜಕೀಯವಾಗಿ ವಸೂಲು ಮಾಡತಕ್ಕ ಹಣ, ನೋಡಿದಾಗ ನಮಗೆ ಈ ಇಲಾಖೆಯ ಬಗ್ಗೆ ಅರ್ಥವಾಗುತ್ತದೆ. ಕಂಟ್ರಾಕ್ಟರುಗಳು ಮಧ್ಯಸ್ಥರು, ರಾಜಕಾರಣಿಗಳು ಹೇಳಿದ ಹಾಗ, ಇಂಜಿನಿಯರ್‌ಗಳು ಹೇಳಿದ ಬಿಲ್ಲನ್ನು ತಯಾರು ಮಾಡುತ್ತಾರೆ ಅವರು ಹೇಳಿದ ಹಾಗೆ ಅಂದಾಜನ್ನು ತಯಾರು ಮಾಡುವವರು ಇದ್ದೇ ಇದ್ದಾರೆ ಅವರು ಹೇಳಿದ ಹಾಗೆ ಫಾಲ್ಸ್ ಬಿಲ್ಲನ್ನು ತಯಾರು ಮಾಡುವವರು ಇದ್ದೇ ಇದ್ದಾರೆ.

ಆಮೇಲೆ ಅದನ್ನು ಮಂಜೂರಾತಿ ಮಾಡುವವರು ಅವರೂ ಇದ್ದಾರೆ. ಈ ಪಬ್ಲಿಕ್ ಹಣ ಯಾವರೀತಿ ಖರ್ಚಾಗುತ್ತದೆ ಎಂದು ನಾವು ಯೋಚನೆ ಮಾಡಿದರೆ ನಮಗಂತೂ ದಿಗಿಲಾಗುತ್ತದೆ. ಸಾರ್ವಜನಿಕರು ಸುಮ್ಮನೆ ಇದ್ದಾರೆ. ಈ ಇಂಜನಿಯರುಗಳಾಗಲಿ, ಕಂಟ್ರಾಕ್ಟರ್ಸ್ ಆಗಲಿ, ಅಧಿಕಾರಿಗಳಾಗಲಿ ಎಷ್ಟು ವೈಭವದ ಜೀವನ ಮಾಡುತ್ತಾರೆ, ಭೋಗ ಜೀವನ ಮಾಡುತ್ತಾರೆ. ಅಂದರೆ ಎಲ್ಲರೂ ಆ ರೀತಿ ಮಾಡುತ್ತಾರೆ ಎಂದು ಹೇಳುತ್ತಾ ಇಲ್ಲ, ಆ ರೀತಿ ಮಾಡುತ್ತಾ ಇರತಕ್ಕಂಥ ಅಧಿಕಾರಿಗಳ ಭೋಗ ಜೀವನವನ್ನು ನೋಡಿದರೆ ನಿಜವಾಗಲೂ ಈ ಸರ್ಕಾರದ ಹಣ ಅವರ ಮೋಜಿಗೋಸ್ಕರ ಇದೆಯೋ ಎನ್ನತಕ್ಕಂಥ ಪ್ರಶ್ನೆ ಉದ್ಭವಿಸುತ್ತದೆ. ನನ್ನ ಅನುಭವದಲ್ಲಿ ನಾನು ಹೇಳುವುದಾದರೆ ಈ ಇಲಾಖೆಗೆ ಇಟ್ಟಿರತಕ್ಕಂಥ ಹಣವನ್ನು ಖರ್ಚು ಮಾಡದೇ ಸುಳ್ಳು ಬಿಲ್ಲುಗಳನ್ನು ತಯಾರುಮಾಡಿ ಲೂಟಿಮಾಡಿ ಅನುಭವಿಸತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಇಂಜನಿಯರಾಗಿ ಕೆಲಸ ಮಾಡತಕ್ಕವರು, ಅವರು ದೊಡ್ಡ ಅಧಿಕಾರಿಯಾಗಲಿ ಸಣ್ಣ ಅಧಿಕಾರಿಯಾಗಲಿ ಅವರು ಎಷ್ಟು ಆಸ್ತಿ ಮಾಡಿದ್ದಾರೆ, ಅವರ ಆಸ್ತಿ ಎಷ್ಟಿದೆ ಎಂದು ತನಿಖೆ ಮಾಡಿದ್ದೀರಾ ? ಚೀಫ್ ಇಂಜನಿಯರಿಂದ ಹಿಡಿದು ಪ್ರತಿಯೊಬ್ಬರೂ ಕಾರ್ಪೊರೇಷನ್‌ನಲ್ಲಿ ಪಿ ಡಬ್ಲ್ಯು.ಡಿ.ಯಲ್ಲಿ ಕೆಲಸ ಮಾಡತಕ್ಕವರು ಪ್ರತಿಯೊಬ್ಬರೂ ಎಷ್ಟು ಆಸ್ತಿ ಮಾಡಿದ್ದಾರೆ ಅದೆಲ್ಲಾ ಸರ್ಕಾರದ ಆಸ್ತಿ, ದುಡಿದ ಆಸ್ತಿ ಅಲ್ಲ, ಅವು ಅವರ ಸಂಬಳದ ಪರಿಮಿತಿಯಲ್ಲಿರತಕ್ಕಂಥ ಆಸ್ತಿಗಳಲ್ಲ ಇವು ಬೇರೆ ರೀತಿ ಸಂಪಾದನೆ ಮಾಡಿದಂಥ ಆಸ್ತಿಗಳು. ಇವೊತ್ತಿನ ದಿವಸ ಅವರು ಇಷ್ಟೆಲ್ಲಾ ಸಂಪಾದನೆ ಮಾಡಿಕೊಂಡಿರುವಾಗ ತಾವು ಯಾವರೀತಿ ಇವರ ಮೇಲೆ ಕಂಟ್ರೋಲಿಂಗ್ ಹತೋಟಿ ಇಟ್ಟುಕೊಂಡಿದ್ದೀರಿ. ನೀವು ಹತೋಟಿ ಇಟ್ಟುಕೊಂಡಿಲ್ಲ ಎಂದು ನಾನು ಹೇಳುತ್ತಾ ಇದ್ದೇನೆ, ಈಗ ೧೯೬೭–೬೮ನೇ ಇಸವಿಯದನ್ನು ನೋಡಿ. ಮೊದಲು ನನ್ನದೇ ಒಂದು ತಾಲ್ಲೂಕನ್ನು ಉದಾಹರಣೆಯಾಗಿ ತೆಗೆದುಕೊಂಡು ಆಮೇಲೆ ಉಳಿದಿದ್ದನ್ನು ಹೇಳುತ್ತೇನೆ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಈ ಅಧಿಕಾರಿಗಳಿಗೆ ಸಂಬಳ ಕೊಟ್ಟಿದ್ದುದು ಬಿಟ್ಟರೆ ಬೇರೆ ಡೆವಲಪ್‌ಮೆಂಟ್ ವರ್ಕ್ಸ್‌ಗೆ ಹಣವೇ ಮಂಜೂರಾಗಿಲ್ಲ. ಲೋಕೋಪಯೋಗಿ ಇಲಾಖೆಯಿಂದ ಯಾವ ಕೆಲಸವೂ ಆಗಿಲ್ಲ, ಯಾವ ಕೆಲಸವನ್ನೂ ತೆಗೆದುಕೊಂಡಿಲ್ಲ, ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿದರೂ ಕೂಡ ಪ್ರಾರಂಭ ಮಾಡಿಲ್ಲ ಬರೀ ಸಂಬಳ ಕೊಟ್ಟಿದ್ದೀರಿ. ಇದೇ ರೀತಿ ಪ್ರತಿಯೊಂದು ತಾಲ್ಲೂಕಿನಲ್ಲೂ ವ್ಯವಹಾರ ಮಾಡುತ್ತಿದ್ದೀರಿ. ಇದಕ್ಕೆ ಕಾರಣ ಏನು ? ಹಣದ ಕೊರತೆ ಕಾರಣ. ಮನಸ್ಸು ಇರಬಹುದು, ಮನಸ್ಸು ಇಲ್ಲ ಎಂದು ಹೇಳುತ್ತಾ ಇಲ್ಲ. ಏಕೆಂದರೆ ಮನಸ್ಸು ಇರಲೇಬೇಕು. ಪಬ್ಲಿಕ್ ಕೋ-ಆಪರೇಟೀವ್ ಬ್ಯಾಂಕ್ ಇರುವಂಥ ಅವರಿಗೆ ಹಣ ಬೇಕಾಗುತ್ತದೆ. ಮನಸ್ಸು ಇರಬಹುದು, ಆದರೆ ವ್ಯವಹಾರ ಆಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ತಮಾಷೆಯಾಗಿ ಮಾತನಾಡಿದಿರಿ ಸಂತೋಷ. ನಿಮ್ಮ ಅಳಿಯ ಒಬ್ಬರು ಅಸಿಸ್ಟೆಂಟ್ ಇಂಜನಿಯರ್ ಇದ್ದರು. ಅವರು ಆಕಸ್ಮಿಕವಾಗಿ ತೀರಿಕೊಂಡು

ಹೋದರು, ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಅವರು ಎಷ್ಟು ಆಸ್ತಿಯನ್ನು ಬಿಟ್ಟು ಹೋಗಿದ್ದರು ನಿಮ್ಮ ಮಂಗಳಿಗೆ ಎನ್ನುವುದನ್ನು ಈ ಸಭೆಯಲ್ಲಿ ಹೇಳುತ್ತೀರಾ ? ಅದು ಇಲ್ಲ ಅಂದರೆ ನಿಮ್ಮ ಅಳಿಯ ಆಸ್ತಿ ಬಿಟ್ಟು ಹೋಗಿಲ್ಲ ಎಂದು ಇದ್ದರೆ ನೀವು ಇಷ್ಟು ಹೊತ್ತು ಭೋಗಜೀವನ ಮಾಡುತ್ತಾರೆ ಎಂದು ಹೇಳಿದಿರಲ್ಲ ಅದಕ್ಕೆ ಪುಷ್ಟೀಕರಣ ಸಿಕ್ಕುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಅವರು ನನ್ನ ಅಳಿಯನ ಬಗ್ಗೆ ಹೇಳಿದ್ದಾರೆ. ನನ್ನ ಅಳಿಯ ಹೌಸಿಂಗ್ ಬೋರ್ಡ್‌ನಲ್ಲಿ ಒಂದು ಮನೆಯನ್ನು ಅಲಾಟ್ ಮಾಡಿಸಿಕೊಂಡರು ಎಂದು ಕಾಣುತ್ತದೆ. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ

ಶ್ರೀ ಹೆಚ್. ಡಿ. ದೇವೇಗೌಡ.—ಅದು ಗೊತ್ತಿದೆ. ಆಸ್ತಿ ಇರಲಿಲ್ಲ ಎಂದು ಗೊತ್ತಿದೆ. ನಿಮ್ಮ ಮಂಗಳಿಗೆ ಮೊಮ್ಮಕ್ಕಳಿಗೆ ಆಸ್ತಿ ಇರಲಿಲ್ಲ. ಆದರೆ ಇಷ್ಟು ಹೊತ್ತು ವಾದ ಮಾಡಿದಿರಲ್ಲ ಜನರಲ್ಲಾಗಿ ಹೇಳಿದಿರಿ ಅದಕ್ಕೆ ಪುಷ್ಟೀಕರಣ ಸಿಕ್ಕುವುದಿಲ್ಲ ಎನ್ನುವುದಕ್ಕೆ ಉದಾಹರಣೆ ಕೊಟ್ಟೆ ಅಷ್ಟೆ.

ಶ್ರೀ ಬಿ. ಬಸವಲಿಂಗಪ್ಪ.—ಬಹಳ ವಂದನೆಗಳು. ಈಗ ನಾನು ಸರ್ವೇಸಾಮಾನ್ಯವಾಗಿ ಹೇಳಿದಂಥ ಹಿನ್ನೆಲೆಯಲ್ಲಿ ಅವರು ಹೇಳಿದ್ದಾರೆ. ನಾನು ಒಪ್ಪುತ್ತೇನೆ ಅವರ ವಾದವನ್ನು. ಅಂದರೆ ಆ ಒಂದು ಶೇಕಡವಾರು ಏನಿದೆ ಅದು ೫ ಪರ್ಸೆಂಟ್ ನಿಮಗೆ ಸಿಕ್ಕುವುದೇ ಇಲ್ಲ. ನೂರಕ್ಕೆ ೯೫ ಪರ್ಸೆಂಟ್ ಈ ಇಂಜನಿಯರ್‌ಗಳು ಏನಿದ್ದಾರೆ ಅವರು ಈ ಕೆಲಸವನ್ನು ಮಾಡಿಯೇ ಮಾಡುತ್ತಾರೆ. ಈಗ ಉದಾಹರಣೆಗೆ ಹೇಳುವುದಾದರೆ ಚೀಫ್ ಇಂಜನಿಯರ್‌ಗಳಿದ್ದಾರೆ. ಇವರು ಎಷ್ಟು ಜನರಿದ್ದಾರೆಂದರೆ, ೨೦ ಜೋನ್‌ಗಳನ್ನು ಮಾಡಿ ಇವರುಗಳನ್ನು ಇಟ್ಟುಕೊಂಡಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡ್, ಕಾಡಾ ಎಲ್ಲಾ ಸೇರಿ ಸುಮಾರು ೩೩-೩೪ ಡಿವಿಜನ್‌ಗಳಿವೆ. ಈ ಡಿವಿಜನ್‌ಗಳಲ್ಲಿರತಕ್ಕ ಚೀಫ್ ಇಂಜನಿಯರ್‌ಗಳ ಕೈಕೆಳಗೆ ಕೆಲಸಮಾಡತಕ್ಕ ಅಧಿಕಾರಿಗಳವರ್ಗ ಏನಿದೆ ಆ ವರ್ಗದ ಜನರು ಸಾವಿರಾರು ಜನರಿದ್ದಾರೆ. ಇವರೆಲ್ಲರೂ ಇದೇ ಕೆಲಸವನ್ನು ಮಾಡುತ್ತಾರೆ. ನಾನು ತಮಗೆ ಒಂದು ಮಾತನ್ನು ಹೇಳಬಯಸುತ್ತೇನೆ. ನೀವು ಈ ದೇಶಕ್ಕೆ ಏನಾದರೂ ಉಪಕಾರವನ್ನು ಮಾಡಬೇಕೆಂದಿದ್ದರೆ ಅಥವಾ ಈ ದೇಶದ ಉದ್ಧಾರವನ್ನು ಮಾಡಬೇಕೆಂದಿದ್ದರೆ ಈ ಇಲಾಖೆಯು ಹತೋಟಿ ಇರಲಿ. ಈ ಇಲಾಖೆಯಲ್ಲಿ ಕೆಲಸಮಾಡತಕ್ಕ ಅಧಿಕಾರಿವರ್ಗದಮೇಲೆ ಹಿಡಿತ ಇರಬೇಕು. ಈ ಇಲಾಖೆಯ ಹೊಣೆ ಹೊತ್ತ ಮಂತ್ರಿ ಯಾರೇ ಆಗಿರಲಿ, ರಾಜಕೀಯ ವ್ಯಕ್ತಿ ಯಾರೇ ಆಗಿರಲಿ ಅವನು ಸತ್ಯಸಂಧ ಆಗಿರಬೇಕು. ಅವನು ಸತ್ಯಸಂಧನಾಗಿಲ್ಲದಿದ್ದರೆ ಇಲಾಖೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ನಿಮ್ಮ ಲೋಕೋಪಯೋಗಿ ಇಲಾಖೆಯು ಯಾವತ್ತಿನಿಂದ ಹದಗೆಟ್ಟಿದೆ ಎಂದರೆ ಸುಮಾರ ೨೮ ವರ್ಷಗಳಿಂದ......

ಶ್ರೀ ಬಾಬುರೆಡ್ಡಿ ವಿ, ತುಂಗಳ್.—೮ ವರ್ಷಗಳ ಹಿಂದೆ ಈ ಪಿ.ಡಬ್ಲ್ಯು.ಡಿ. ಇಲಾಖೆಯ ಮಂತ್ರಿಗಳಾಗಿದ್ದವರು ಯಾರು ಗೊತ್ತೆ ?

ಶ್ರೀ ಬಿ. ಬಸವಲಿಂಗಪ್ಪ.—ಆಗ ಯಾರು ಮಂತ್ರಿಗಳಾಗಿದ್ದರು ಎಂಬುದನ್ನು ಬಹಿರಂಗವಾಗಿ ಹೇಳುತ್ತೇನೆ. ಈ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ನೀರಾವರಿ ಇಲಾಖೆಯಲ್ಲಿರತಕ್ಕ ಚೀಫ್ ಇಂಜನಿಯರ್‌ಗಳು ದೊಡ್ಡ ದೊಡ್ಡ ಅಧಿಕಾರಿಗಳನ್ನು ಕೂರಿಸಿಕೊಂಡು ರಾಜಕೀಯಕ್ಕೆ ಹಣವನ್ನು ವಸೂಲ್ಮಾಡಲು ಪ್ರಯತ್ನ ಮಾಡಿದರೋ ಆಗ ಈ ಅವ್ಯವಸ್ಥೆ ಶುರುವಾಯಿತು. ನನಗೆ ತಿಳಿದಂತೆ ಚೀಫ್ ಇಂಜನಿಯರ್‌ಗಳು ರಾಜಕೀಯಕ್ಕೆ ಹಣ ಹೊಂಚುವುದಕ್ಕೆ ಪ್ರಯತ್ನ ಮಾಡಬೇಕಾದರೆ ಅಧಿಕಾರಿವರ್ಗವನ್ನು ಬೇರೆಬೇರೆ ಕಡೆಗೆ ವರ್ಗಾವಣೆ ಮಾಡಲೇಬೇಕಾಗುತ್ತದೆ ಈ ರೀತಿ ಕೋಟ್ಯಂತರ ರೂಪಾಯಿಗಳನ್ನು ವಸೂಲ್ಮಾಡಬೇಕಾದರೆ ಇಂಥ ಕೆಲಸವನ್ನು ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ ಇದು ಸಾಧ್ಯವಾಗುವುದಿಲ್ಲ. ಸುಮಾರು ೮-೧೦ ವರ್ಷಗಳಿಂದ ಇದು ಸಾರ್ವೋದ್ಧಾರವಾಗಿ ನಡೆಯುತ್ತಾ ಬಂತು. ಹಣವನ್ನು ವಸೂಲ್ಮಾಡುವುದು ನಡೆಯಿತು. ಕಂಟ್ರಾಕ್ಟರ್‌ಗಳಿಂದ ವಸೂಲ್ಮಾಡಿ ರಾಜಕೀಯಕ್ಕೋಸ್ಕರ ಕೊಟ್ಟಿದ್ದಾಯಿತು. ರಾಜಕೀಯಕ್ಕೋಸ್ಕರ ಈ ರೀತಿ ಹಣವನ್ನು ವಸೂಲ್ಮಾಡಬಾರದೆಂದು ನಮ್ಮ ರಾಜಕೀಯ ಮುಖಂಡರು ಯಾರಿದ್ದಾರೆ ಅವರೂ ಹೇಳಿದ್ದಾರೆ. ಅದೇರೀತಿ ನಮ್ಮವರೂ ಹೇಳಿದ್ದಾರೆ, ನಾವೂ ಹೇಳಿದ್ದೇವೆ. ಈಗ ನಾವೂ, ನೀವೂ ಇಬ್ಬರೂ ಸೇರಿ ಇದನ್ನು ಇಲ್ಲಿಗೆ ಕೊನೆ ಮಾಡಬೇಕು. ಇದನ್ನು ಕೊನೆ ಮಾಡದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಈ ಆಯವ್ಯಯ ಪಟ್ಟಿಯನ್ನು ನೋಡಿ ಇದು ಸರಿಯಾಗಿದೆ, ಅಥವಾ ಸರಿಯಾಗಿಲ್ಲ ಎಂದು ವಾದ ಮಾಡುವುದರಲ್ಲಿ ಏನೇನೂ ಅರ್ಥವಿಲ್ಲವೆಂದು ನನ್ನ ಅಭಿಪ್ರಾಯ. ನಾವು ಸತ್ಯಸಂಧರಾಗಿರಲು ಮನಃ

ಪೂರ್ವಕವಾಗಿ ಸಿದ್ಧರಾಗಬೇಕು. ಎಷ್ಟು ಜನ ಈರೀತಿ ಕೆಲಸ ಮಾಡುವುದಕ್ಕೆ ಸಿದ್ಧರಿದ್ದಾರೆ ಅಷ್ಟೇ ಜನರನ್ನು ನಾವು ಇಟ್ಟುಕೊಳ್ಳೋಣ.

ಸ್ವಾಮಿ, ಬಹಳಷ್ಟು ಜನ ಅಧಿಕಾರಿಗಳು ಈ ಸರ್ಕಾರದ ಸ್ವತ್ತನ್ನು ಉಪಯೋಗಿಸಿಕೊಂಡು ಸಾರ್ವಜನಿಕರ ಆಸ್ತಿಯನ್ನು ಉಪಯೋಗಿಸಿಕೊಂಡು ಲಂಚವನ್ನು ಹೊಡೆದು ಸ್ವಂತ ಆಸ್ತಿಯನ್ನು ಮಾಡಿಕೊಂಡಿದ್ದಾರೆಂದು ನಾನು ಕೇಳಿದ್ದೇನೆ. ಈಗ ನಾನು ಇದರ ವಿವರಕ್ಕೆ ಹೋಗುವುದಿಲ್ಲ ಸಮಯ ಬಂದಾಗ ನಾನು ಹೇಳುತ್ತೇನೆ. ಯಾರುಯಾರು ಈ ಸರ್ಕಾರದ ಹಣವನ್ನು ಉಪಯೋಗ ಮಾಡಿಕೊಂಡು, ತಮ್ಮ ಅಧಿಕಾರವನ್ನು ಉಪಯೋಗ ಮಾಡಿಕೊಂಡು ಅಕ್ರಮವಾಗಿ ಆಸ್ತಿಯನ್ನು ಸಂಪಾದನೆ ಮಾಡಿಕೊಂಡಿದ್ದಾರೆ ಅಂಥವರನ್ನು ಇಂಡಿಯನ್ ಪೀನಲ್ ಕೋಡ್‌ನ ಪ್ರಕಾರ ಶಿಕ್ಷೆಗೆ ಗುರಿ ಮಾಡದಿದ್ದರೆ ನಾನಂತೂ ಹೇಳುತ್ತೇನೆ, ನಮ್ಮ ದೇಶ ಉದ್ಧಾರವಾಗುವುದಿಲ್ಲ. ಎಲ್ಲೋ ಇರತಕ್ಕ ಹಣವನ್ನು ನೋಡಿ ನಾವು ಜೊಲ್ಲು ಸುರಿಸಿಕೊಂಡು ಈ ಸರ್ಕಾರವನ್ನು ನಡೆಸುತ್ತೇವೆಂದರೆ ಅದೂ ಕೂಡ ಆಗುವುದಿಲ್ಲ. ನಾವು ಸರ್ಕಾರವನ್ನು ಸುವ್ಯವಸ್ಥಿತವಾಗಿ ನಡೆಸುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ. ಜನರಲ್ಲಿರತಕ್ಕ ಬಡತನ ಪರಿಹಾರವಾಗುವುದಿಲ್ಲ. ಈಗಿರತಕ್ಕ ಅವ್ಯವಸ್ಥೆ ಹೀಗೆಯೇ ಮುಂದುವರಿಯುತ್ತದೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಈ ಸಿಳ ಜನ ಚೀಫ್ ಇಂಜಿನಿಯರ್‌ಗಳಿಗೂ ಕೆಲಸ ಇದೆಯೇ ಎಂಬ ಪ್ರಶ್ನೆಯನ್ನು ನಾನು ಕೇಳುತ್ತೇನೆ. ಅಸೆಸ್‌ಮೆಂಟ್ ಆಫ್ ವರ್ಕ್‌ಲೋಡ್ ಆಗಿದೆಯೆ ? ಅವರ ಗುರಿ ಏನು. ಅವರು ಸಾಧನೆ ಮಾಡತಕ್ಕ ಕೆಲಸ ಏನು ಎಂಬ ಬಗ್ಗೆ ನಿರ್ದೇಶನ ಇದೆಯೆ ? ನಿರ್ದೇಶನ ಕೊಟ್ಟಿದ್ದರೆ ಅದನ್ನು ಪಾಲನೆ ಮಾಡುತ್ತಿದ್ದಾರೆಯೇ. ನಿಮ್ಮ ಸರ್ಕಾರದ ನಿರ್ದೇಶನಗಳನ್ನು ಧೂಳೀಪಟ ಮಾಡಿದ್ದಾರೆ. ಯಾರೂ ಕೂಡ ವಿಧೇಯತೆಯಿಂದ ನಡೆದುಕೊಳ್ಳುತ್ತಿಲ್ಲ. ಅಕೌಂಟೆಂಟ್ ಜನರಲ್ ರಿಪೋರ್ಟ್, ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ನೋಡಿದರೆ ಇದು ವೇದ್ಯವಾಗುತ್ತದೆ. ಹೀಗೆ ಗುರಿ ಇಲ್ಲದೆ, ಜವಾಬ್ದಾರಿಯ ಹೊರೆ ಇಲ್ಲದೆ ಹುದ್ದೆಗಳನ್ನು ನಿರ್ಮಾಣ ಮಾಡಿಕೊಂಡು, ಅವರಿಗೆ ಸಿಬ್ಬಂದಿ ಕೊಟ್ಟು, ಸಂಬಳ ಸಾರಿಗೆ ಕೊಟ್ಟು, ಜೊತೆಗೆ ಗಿಂಬಳ ಕೊಟ್ಟು ಸರ್ಕಾರವನ್ನು ಎಲ್ಲಿಯವರೆಗೆ ನಡೆಸುತ್ತೀರಿ ಯೋಚನೆ ಮಾಡಿ. ಯೋಚನೆ ಮಾಡಿದ್ದೀರಾ ಸ್ವಾಮಿ ? ಅವರಿಗೆ ವರ್ಕ್‌ಲೋಡ್ ಇದೆಯೇ, ಅದನ್ನು ನಿರ್ವಹಣೆ ಮಾಡುತ್ತಿದ್ದಾರೆಯೋ ಇಲ್ಲವೇ, ಅವಶ್ಯಕತೆ ಇದೆಯೋ ಇಲ್ಲವೇ ಎಂಬ ಬಗ್ಗೆ ಒಂದು ಸಮಿತಿ ಮಾಡಿ ನಿರ್ಣಯಾತ್ಮಕ ನಿರ್ಣಯ ತೆಗೆದುಕೊಂಡಿದ್ದೀರಾ ? ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ನೀವು ಅದರ ಕಡೆ ಹೋಗಿಯೇ ಇಲ್ಲ. ಜನತಾ ಸರ್ಕಾರ ಬಂದಮೇಲೆ ಬರೀ ರಾಜಕೀಯ ಮಾಡುವುದು, ಕಾಂಗ್ರೆಸ್‌ನವರನ್ನು ಬೈಯುವುದು, ಕೇಂದ್ರ ಸರ್ಕಾರವನ್ನು ಬೈಯುವುದು ಇದೇ ಆಗಿದೆ. ನಾವೇನು ಮಾಡಿದ್ದೇವೆ ? ನಾವೂ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದೇವೆ. ನಮ್ಮ ಸರ್ಕಾರ ಇದ್ದೇ ಇರುತ್ತದೆ, ಭದ್ರವಾಗಿರುತ್ತದೆ, ಕಾಂಗ್ರೆಸ್ ಪಕ್ಷವನ್ನು ಈ ದೇಶದಿಂದ ಓಡಿಸುವುದಕ್ಕೆ ಯಾರ ಕೈಯಲ್ಲೂ ಆಗಿಲ್ಲ. ಯಾರ ಕೈಯಲ್ಲೂ ಆಗುವುದೂ ಇಲ್ಲ. ಸುಮ್ಮನೆ ಹಂಗಾಮಿ ಪ್ರಯತ್ನ ಆಗುತ್ತದೆಯೇ ಹೊರತು ಕಾಂಗ್ರೆಸ್ ಪಕ್ಷವನ್ನು ದೂರ ಹಾಕತಕ್ಕ ಪ್ರಶ್ನೆ ಬರುವುದೇ ಇಲ್ಲ. ನಾನು ತಮಗೆ ಹೇಳುತ್ತಿದ್ದೇ, ನಾವು ಸರ್ಕಾರದಲ್ಲಿದ್ದಾಗ ತಪ್ಪು ಮಾಡಿದ್ದರೆ ಅದನ್ನು ಸರಿ ಮಾಡಿ, ದೇಶಕ್ಕೆ ಮಾದರಿಯಾಗಿ ನೀವು ರಾಜ್ಯಭಾರ ಮಾಡಿ, ಶಹಭಾಸ್‌ಗಿರಿ ಕೊಡುತ್ತೇವೆ ನಿಮಗೆ. ಇದು ನಮ್ಮ ಇಚ್ಛೆ. ನಮಗೇನೂ ಬೇರೆ ಹೊಟ್ಟೆ ಉರಿ ಇಲ್ಲ. ಐದು ವರ್ಷದಿಂದ ಇದ್ದೇವೆ. ವಿರೋಧ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೇವೆ. ಬೇರೆ ಕೆಲಸ ಮಾಡುತ್ತಿಲ್ಲ. ಸಂತೋಷದಿಂದ ನಿಮ್ಮ ಜೊತೆ ನಡೆಸಿಕೊಂಡು ಬಂದಿದ್ದೇವೆ. ಮುಖ್ಯಮಂತ್ರಿಗಳು ಹೇಳುತ್ತಾರೆ, ಜನರು ಎಲ್ಲಿಯವರೆಗೆ ಬೆಂಬಲ ಕೊಡುತ್ತಾರೋ ಅಲ್ಲಿಯವರೆಗೆ ಇರುತ್ತೇವೆ, ಯಾರಾದರೂ ಒಬ್ಬರು ಹೋಗು ಎಂದರೂ ಹೋಗುತ್ತೇನೆ ಎಂದು ಹೇಳಿದರು. ನಾನು ಅದೇ ಹೇಳುತ್ತಿದ್ದೇನೆ. ಎಲ್ಲಿಯವರೆಗೆ ಜನ ನಿಮಗೆ ಬೆಂಬಲ ಕೊಡುತ್ತಾರೆ, ಎಲ್ಲಿಯ ವರೆಗೆ ಇರು ಎಂದು ಹೇಳುತ್ತಾರೆ ಅಲ್ಲಿಯವರೆಗೆ ನೀವು ಇರಿ. ನೀವು ಹೋಗಿ ಎಂದು ಹೇಳುವುದಿಲ್ಲ. ಜನ ಯಾವಾಗ ನಮಗೆ ಬೆಂಬಲ ಕೊಡುತ್ತಾರೋ ಆಗ ನಾವು ಬರುತ್ತೇವೆ. ಅಷ್ಟೇ ವ್ಯತ್ಯಾಸ. ಅದಕ್ಕೋಸ್ಕರ ನೀವಿರುವವರೆಗೂ ಉತ್ತಮ ಆಡಳಿತ ಮಾಡಿ. ದೇಶಕ್ಕೆ, ರಾಜ್ಯಕ್ಕೆ ಉತ್ತಮ ಆಡಳಿತ ಕೊಡಿ. ಜನ ಏನು ನಿರೀಕ್ಷೆ ಮಾಡುತ್ತಿದ್ದಾರೆ ಅದನ್ನು ಮಾಡಿ. ನೀವೇ ರಾಜ್ಯಭಾರ ಮಾಡಿದರೆ ಸರಿಯಾಗಿ ಮಾಡುತ್ತೀರಿ. ಆದರೆ ಅಧಿಕಾರಿಗಳ ಮುಖಾಂತರ ರಾಜ್ಯಭಾರ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ನಿಮ್ಮ ಕೈಯಲ್ಲಿ ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ. ಇದು

ನನ್ನ ಅನುಭವದ ಮಾತು. ನಿಮ್ಮ ಅನುಭವದಲ್ಲೂ ಬಂದಿರಲೇಬೇಕು. ನೀವು ಮಂತ್ರಿಗಳಾಗಿದ್ದೀರಿ. ನಾನೂ ಮಂತ್ರಿ ಕೆಲಸ ಬಹಳ ವರ್ಷ ಮಾಡಿದ್ದೇನೆ. ಮಂತ್ರಿಗಳಾದವರು ನೀವು ತಮ್ಮ ಇಲಾಖೆಗುಲ್ಲಿ ಯಾವ ಹುದ್ದೆಯಲ್ಲೂ ತಮ್ಮ ಜಾತಿಯವರನ್ನು ಇಟ್ಟುಕೊಳ್ಳಬಾರದು. ಮಂತ್ರಿಯಾಗಿರತಕ್ಕವನು ಸೆಕ್ರೆಟರಿಯಾಗಲೀ not his own personal Secretaries ಅವರನು ಇಟ್ಟುಕೊಂಡಾಗ ಏನಾಗುತ್ತದೆ ? ಸೆಕ್ರೆಟರಿಯವರನ್ನು ನಿಮ್ಮ ಕಡೆಯವರನ್ನೇ ಇಟ್ಟುಕೊಂಡಿರಿ ಅಂತ ಇಟ್ಟುಕೊಳ್ಳಿ. ಮೂರು ನಾಲ್ಕು ವರ್ಷ ನಿಮ್ಮ ಹತ್ತಿರವೇ ಇಟ್ಟುಕೊಂಡರೆ ಅವರಿಗೆ ಸಲಿಗೆ ಬರುತ್ತದೆ. ನಮ್ಮ ಜಾತಿಯವರು ಅವರು, ಏನೂ ಮಾಡುವುದಿಲ್ಲ ಎಂದು ದುರುಪಯೋಗ ಮಾಡಿಕೊಂಡು ಏನು ಕೆಲಸ ಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾನೆ. ಬೇರೆ ಜನಾಂಗದವರನ್ನು ತುಳಿಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅನಾವಶ್ಯಕವಾದ ಹುದ್ದೆಗಳಿಗೆ ವರ್ಗಾವಣೆ ಮಾಡುವ ಪ್ರಯತ್ನ ಮಾಡುತ್ತಾನೆ. ತಾವು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದೀರಿ. ಇಲ್ಲಿ ತಮ್ಮ ಜಾತಿಯವರನ್ನು ಇಟ್ಟುಕೊಳ್ಳಬಾರದು ಎಂದು ಹೇಳುತ್ತೇನೆ ಸಾರ್ವಜನಿಕ ಹಿತದೃಷ್ಟಿಯಿಂದ, ಆಡಳಿತದ ದೃಷ್ಟಿಯಿಂದ ತನ್ನ ಜಾತಿಯವರನ್ನು ತನ್ನ ಹತ್ತಿರ ಇಟ್ಟುಕೊಳ್ಳಬಾರದು. ನಾನೆಂದೂ ಇದನ್ನು ಮಾಡಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ದೇವೇಗೌಡರು ಇದ್ದಾಗ ಆಗಲಿ, ಈಗಲಾಗಲಿ ಆ ರೀತಿ ನಮ್ಮಲ್ಲಿ ಇಲ್ಲ. ನಾನು ೫ ವರ್ಷದ ಅವಧಿಯ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಜಾತಿಯವರು ಇಲ್ಲವೆ ? ನಿಮ್ಮ ಜಾತಿಯವರು ಅಂದರೆ...

ಶ್ರೀ ಎಂ. ಚಂದ್ರಶೇಖರ್.—ಸಂಬಂಧಪಟ್ಟ ಇಲಾಖೆಯ ಬಗ್ಗೆ ನೀವು ಮಾತನಾಡುತ್ತಿರುವುದರಿಂದ ಇದರಲ್ಲಿ ಹೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಇಲಾಖೆಯ ಬಗ್ಗೆಯೇ ಹೇಳುತ್ತಿದ್ದೇನೆ. ಯಾರು ಯಾರು ನಿಮ್ಮ ಜಾತಿಯವರು ಇದ್ದಾರೆ ಅವರನ್ನು ಕಿತ್ತು ಬಿಸಾಕಿ. ನೀವು ಇಲ್ಲವೆಂದು ಹೇಳುತ್ತಿದ್ದೀರಿ. ನಾನು ಇದ್ದಾರೆ ಎಂದು ಹೇಳುತ್ತೇನೆ. ಇದ್ದರೆ ಕಿತ್ತುಹಾಕಿ ಜಾತಿಯವರು ಯಾರಿದ್ದರೂ ಅವರನ್ನು ೩-೪ ವರ್ಷದ ಮೇಲೆ ಒಂದು ಹುದ್ದೆಯಲ್ಲಿ ಇಟ್ಟುಕೊಳ್ಳಬೇಡಿ. ನಿರ್ಗತಿಕ ಜನಾಂಗಕ್ಕೆ, ಹಿಂದುಳಿದ ವರ್ಗಕ್ಕೆ ಸೇರಿದ್ದು ಯೋಗ್ಯರಾಗಿದ್ದರೆ ಅಂಥವರನ್ನು ತಂದಿಟ್ಟುಕೊಂಡು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ನಿಮಗೆ ಅನುಕೂಲವಾಗುತ್ತದೆ ಹಿಂದೆ ನೀವು ಇಟ್ಟುಕೊಂಡಿಲ್ಲವೆಂದು ಅಲ್ಲ. ಚುನಾವಣೆ ಕಾಲದಲ್ಲಿ ಹಣ ಬೇಕು ಎಂದು ಅವರಿಂದ ವಸೂಲ್ಮಾಡಬೇಕೆಂಬ ಉದ್ದೇಶ ಇತ್ತು. ನೀವು ಸತ್ಯವಂತರಿದ್ದೀರಿ. ನೀವು ಆ ರೀತಿ ವಸೂಲ್ಮಾಡುವುದಿಲ್ಲ, ನನಗೆ ಗೊತ್ತಿಲ್ಲವೆ, ನೀವು ಏನು ಮಾಡುತ್ತೀರಿ ಎಂದು.

ಶ್ರೀ ಆರ್. ಎನ್. ನಾಯಕ್ —ಸತ್ಯವಂತರು ಅಂದರೆ ಅವರು ಅದನ್ನೇ ನಂಬಿಕೊಳ್ಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಏತಕ್ಕೆ ಇದರ ಮೇಲೆ ಕಳಕಳಿ ಎಂದರೆ ಇದು ಸರಿ ಹೋಗಬೇಕೆಂದು ನಾನು ಅನುಭವಿಸಿದ ನನ್ನ ಜೀವನದ ವಿಚಾರವನ್ನು ಹೇಳುತ್ತೇನೆ. ನನ್ನದು ಬಹಿರಂಗ.

ಶ್ರೀ ಕೆ. ಮಲ್ಲಪ್ಪ —ತಾವು ಅನುಭವಿಸದೆ ಇದ್ದರೂ ತಮ್ಮ ಸಹೋದ್ಯೋಗಿಗಳು ಅನುಭವಿಸಿದ್ದನ್ನು ನೆನಪಿಗೆ ತಂದುಕೊಂಡು ಮಾತನಾಡುತ್ತಿದ್ದಾರೆ.

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ನಾನು ನಿರ್ಮಲ ಜೀವನ ಮಾಡಬೇಕು. ನಾನು ನನ್ನ ಸಾರ್ವಜನಿಕ ಜೀವನದಲ್ಲಿ ಏನೇನು ಕೆಲಸ ಮಾಡಿದ್ದೇನೆ ಅದೆಲ್ಲ ಸಾರ್ವಜನಿಕ ವೀಕ್ಷಣೆಗೆ ಒಳಪಟ್ಟದ್ದು ಎಂದು ಹೇಳಿದ್ದೇನೆ ಸಾರ್ವಜನಿಕ ಜೀವನದ ಕೆಲಸ ಕಾರ್ಯಗಳನ್ನು ಯಾರು ಬೇಕಾದರೂ ಪರಿಶೀಲಿಸಬಹುದೆಂದು ಹೇಳಿದ್ದೇನೆ. ಅದನ್ನು ಮಾಡಬಹುದು ಹಿಂದೆ ಏನೇನೋ ಮಾಡಿದರು ಎಂದು ಹೇಳುತ್ತಾರೆ. ಅದನ್ನು ನೀವು ಮಾಡಬೇಡಿ ಎಂದು ಹೇಳುತ್ತೇನೆ. ಹಿಂದಿನ ಅಧಿಕಾರಿಗಳ ಮೇಲೆ ಸಿಐಡಿ.ಗಳನ್ನು ಬಿಡಬೇಕು. ಪ್ರತ್ಯಕ್ಷವಾಗಿ ನಾನು ಕಣ್ಣಿನಿಂದ ನೋಡಿದ ಕೆಲವು ನಿದರ್ಶನಗಳನ್ನು ಹೇಳುತ್ತಿದ್ದೇನೆ. ಹಲವಾರು ಮಂದಿ ಅಧಿಕಾರಿಗಳು ವೀಕ್ ಎಂಡ್ ಟ್ರಿಪ್ಸ್ ಎಂದು ಮಾಡುತ್ತಾರೆ. ಬೆಳಗಾಂನಿಂದ ಬೆಂಗಳೂರಿಗೆ ಬರುತ್ತಾರೆ, ಮೈಸೂರಿಗೆ ಹೋಗುತ್ತಾರೆ, ಬೀದರ್‌ನಿಂದ ಮೈಸೂರಿಗೆ ಹೋಗುತ್ತಾರೆ, ಹೈದರಾಬಾದಿಗೆ, ಡೆಲ್ಲಿಗೆ

ಬಾಂಬೆಗೆ ಹೋಗುತ್ತಾರೆ. ಉದಾಹರಣೆಗಳನ್ನು ಕೊಡಬೇಕೆಂದರೆ ಕೊಡುತ್ತೇನೆ. ಅವರು ಏತಕ್ಕೆ ಹೋಗುತ್ತಾರೆಂದರೆ ಎಲ್ಲವನ್ನೂ ಅನುಭವಿಸುವುದಕ್ಕೆ ಹೋಗುತ್ತಾರೆ. ಸಾವಿರಾರು ರೂಪಾಯಿಗಳನ್ನು ವ್ಯಯ ಮಾಡುತ್ತಾರೆ ಆ ಟ್ರಿಪ್‌ನಲ್ಲಿ. ಅಂಥವರನ್ನು ನೀವು ಭಾನುವಾರ ದಿವಸ ಸಿಐಡಿ.ಗಳನ್ನು ಬಿಟ್ಟು ಪರೀಕ್ಷೆ ಮಾಡಬೇಕು. ಅವರು ೧೦–೧೫–೨೦ ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡುತ್ತಿರುತ್ತಾರೆ. ಇದು ನಮ್ಮ ಹಣ ಅಲ್ಲವೆ ? ಲೋಕೋಪಯೋಗಿ ಹಣ ಅಲ್ಲವೆ ? ಇಂಥವರಿಗೆ ಏನು ಮಾಡಬೇಕೆಂದು ಪ್ರಶ್ನೆ. ಇಲಾಖೆಯಲ್ಲಿ ಹಣವನ್ನು ಬಿಡುವಾಗ ನಿರ್ಬಂಧ ಹಾಕಬೇಕು ಚೀಫ್ ಇಂಜಿನಿಯರ್ ಆಗಿರತಕ್ಕವರು, ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿರತಕ್ಕವರು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರ ಮಾತು ಕೇಳಿ ಎಲ್ಲವನ್ನು ಅನುಭವಿಸುವುದಕ್ಕೆ ಬೆಂಗಳೂರಿಗೆ ಬರುವುದಾದರೆ ಹತೋಟಿ ಎಲ್ಲಿಂದ ಬಂತು ? ತಾವು ಇವರ ಮೇಲೆ ಕಣ್ಣಿಟ್ಟು ಇವರ ವರ್ತನೆ, ನಡೆ ನುಡಿ, ವ್ಯವಹಾರ, ಆಚರಣೆ ಇವೆಲ್ಲವನ್ನು ನೋಡುವುದಾದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇನ್ನು ವರ್ಗಾವಣೆಯ ವಿಚಾರದಲ್ಲಿ ಹೇಳುವುದಾದರೆ, ದೇವೇಗೌಡರು ಇಲ್ಲಿಯೇ ಇದ್ದಾರೆ. ನನ್ನ ಮಾತು ಕೇಳುವುದಕ್ಕೆ ಅವರಿಗೆ ಆತ್ಮಾಭಿಮಾನ ಎಂದು ಕಾಣುತ್ತದೆ ಒಬ್ಬ ಶಾಸಕರು ಹೇಳಿದರೆ ಅದರಂತೆಯೇ ಮಾಡಿಬಿಡುವುದು ಚೀಫ್ ಇಂಜನಿಯರಿಗೆ ವರ್ಗಾವಣೆ ಮಾಡುವ ಅಧಿಕಾರ ಇದೆ. ಆದರೆ ಅವರಿಗೆ ಅಧಿಕಾರ ಇಲ್ಲದಂತೆ ಮಾಡುವುದು. ಸೆಕ್ರಟರಿಯಾಗಿರತಕ್ಕವರಿಗೆ ಅಧಿಕಾರ ಇದೆಯೇ ಅಂದರೆ ಅವರಿಗೂ ಇಲ್ಲ. ಮಂತ್ರಿಯಾಗಿರತಕ್ಕವರು ಯಾರ ಮೇಲೆ ಹತೋಟಿ ಇಡಬೇಕು. ಯಾರ ವರ್ಗಾವಣೆ ಅಧಿಕಾರ ಎಷ್ಟಿರಬೇಕು, ಹೇಗಿರಬೇಕು ಎಂಬುದನ್ನು ತಾವು ಇಟ್ಟುಕೊಳ್ಳದೆ ಹೋದರೆ, ಎಲ್ಲವನ್ನು ತಾವೇ ಇಟ್ಟುಕೊಂಡರೆ ಎಲ್ಲವೂ ಕೇಂದ್ರೀಯವಾಗುತ್ತದೆ. ವರ್ಗಾವಣೆಯೂ ಕೇಂದ್ರೀಯವಾಗುತ್ತದೆ. ಅದರಿಂದ ಅವ್ಯವಹಾರ ಪ್ರಾರಂಭವಾಗುತ್ತದೆ.

ನಾನೇ ಎಂ.ಎಲ್.ಎ ಎಂದು ಇಟ್ಟುಕೊಳ್ಳೋಣ. ನನ್ನ ಕ್ಷೇತ್ರಕ್ಕೆ ಇಂಥ ಅಧಿಕಾರಿಗಳನ್ನೇ ಏಕೆ ಎಂದರೆ ಆ ಅಧಿಕಾರಿ ನಾನು ಹೇಳಿದಹಾಗೆ ಕೇಳಲೇಬೇಕು ಕೇಳದೇ ಹೋದರೆ ಅವನು ಇರುವುದಕ್ಕಾಗುವುದಿಲ್ಲ ಪುನಃ ಮಂತ್ರಿಗಳ ಹತ್ತಿರ ಬಂದು ವರ್ಗಾವಣೆ ಮಾಡತಕ್ಕ ಪ್ರಯತ್ನ ನಡೆಯುತ್ತದೆ. ನಾನು ಪ್ರತ್ಯಕ್ಷವಾಗಿ ತಿಳಿದುಕೊಂಡತಕ್ಕ ವಿಚಾರ ಹೇಳುವುದಾದರೆ ಯಾರು ಯಾರು ಆ ರೀತಿ ಹಾಕಿಸಿಕೊಂಡು ಹೋಗಿದ್ದಾರೆ ಪಿ.ಡಬ್ಲ್ಯು.ಡಿ. ಇಲಾಖೆಯವರಾಗಲೀ, ಬಿ.ಡಿ.ಓ. ಆಗಲೀ ಆ ಅಧಿಕಾರಿಗಳಿಂದ ಹಣ ವಸೂಲಿ ನೇರವಾಗಿ ಆಗುತ್ತಿದೆ. ಬಹಳ ಜನ ಮಾಡದೇ ಇರಬಹುದು. ಸರ್ವೇಸಾಧಾರಣವಾಗಿ ಹೇಳಬೇಡಿ ಎಂದು ಹೇಳುತ್ತಾರೆ. ನಾನು ಹಾಗೆ ಸರ್ವೇಸಾಧಾರಣವಾಗಿ ಹೇಳುವುದಿಲ್ಲ. ಈ ರೀತಿ ಅವಕಾಶ ಕೊಟ್ಟರೆ ಈ ಕೆಲಸ ಮಾಡುವುದಕ್ಕೆ ತಡೆಯಾಗುತ್ತದೆ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇಲ್ಲದೇಹೋದರೆ ಯಾವ ಒಬ್ಬ ಅಧಿಕಾರಿ ಯಾವ ಕ್ಷೇತ್ರಕ್ಕೆ ಬಂದರೆ ಏನು? ನನ್ನ ಕ್ಷೇತ್ರಕ್ಕೆ ಯಾರೋ ಒಬ್ಬ ಅಧಿಕಾರಿಯನ್ನು ವರ್ಗಾವಣೆ ಮಾಡಿದರು ನಾನು ಬೇಡ ಎಂದು ಹೇಳಲಿಲ್ಲ. ಯಾರೋ ಬರುತ್ತಾರೆ. ಅವರಿಂದ ಕೆಲಸ ತೆಗೆದುಕೊಳ್ಳೋಣ. ಸರಿಯಾಗಿ ಕೆಲಸ ಮಾಡದೇ ಹೋದರೆ ಕೆಲಸ ಮಾಡಿಲ್ಲ ಎಂದು ಹೇಳುವುದಕ್ಕೆ ಮಂತ್ರಿಗಳ ಹತ್ತಿರ ಬಂದಿದ್ದೇನೆಯೇ ಹೊರತು ವರ್ಗಾವಣೆಗೆ ಬರುವುದಿಲ್ಲ ನಾನು. ಈ ನೀತಿ, ಸಿದ್ಧಾಂತ ಸರ್ಕಾರದ ಮುಂದೆ ಇರಬೇಕೆಂದು ನಾನು ತಮಗೆ ಹೇಳುತ್ತಿದ್ದೇನೆ. ಲೋಕೋಪಯೋಗಿ ಮಂತ್ರಿಗಳು ಪ್ರವಾಸ ಮಾಡುತ್ತಾರೆ ಎಂದು ಇಟ್ಟುಕೊಳ್ಳೋಣ.

ಶ್ರೀ ಆರ್. ವೆಂಕಟರಾಮಯ್ಯ.—ತಮ್ಮ ಕಾಲದಲ್ಲಿ ಈ ತರಹ ನಡೆಯುತ್ತಾ ಇರಲಿಲ್ಲವೆ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಆ ಕಡೆ ನೋಡುವುದಕ್ಕೆ ಹೋಗಲಿಲ್ಲ. ಈಗ ನೋಡಿದ್ದೇನೆ. ನಡೆಯುತ್ತಿದೆ ಎಂದು ಹೇಳುತ್ತಿದ್ದೇನೆ. ಆಗ ಏನು ನಡೆಯುತ್ತಿತ್ತೋ ನನಗೆ ಗೊತ್ತಿಲ್ಲ. ಪ್ರತ್ಯಕ್ಷವಾಗಿ ನನಗೇನೂ ರುಜುವಾತಾಗಿಲ್ಲ. ಅದಕ್ಕೋಸ್ಕರವಾಗಿ ಹೇಳುವುದಿಲ್ಲ. ಈಗ ಮಂತ್ರಿಗಳು ಪ್ರವಾಸ ಮಾಡುತ್ತಾರೆ. ಅಧಿಕಾರಿಗಳು ಪ್ರವಾಸ ಮಾಡುತ್ತಾರೆ. ಏತಕ್ಕೆ ಮಾಡಬೇಕು ಎಂಬುದು ಪ್ರಶ್ನೆ. ಮಂತ್ರಿಗಳಿಗೆ ಏನು ಕೆಲಸ? ಆಯವ್ಯಯ ಪಟ್ಟಿಯಲ್ಲಿ ಯಾವ ಕೆಲಸಕ್ಕೆ ಮಂಜೂರಾತಿ ಕೊಟ್ಟಿದೆಯೋ ಆ ಕೆಲಸ ಆಗಿದೆಯೋ ಆಗಿಲ್ಲವೇ, ಎಷ್ಟು ಕೆಲಸ ಆಗಿದೆ ಎಂಬ ಬಗ್ಗೆ ವಿಚಾರಣೆ ಮಾಡುವುದಕ್ಕೆ ಹೋಗಬೇಕು. ಯಾವ ಜಾತಿಯವರು ಎಷ್ಟು ಜನ ಇದ್ದಾರೆ, ಯಾವ ಜಾತಿಯವರು ಎಲ್ಲಿದ್ದಾರೆ, ಯಾವ ಯಾವ ವ್ಯವಹಾರ ಮಾಡಿದ್ದಾರೆ ಎಂದು ನೋಡುವುದಕ್ಕೆ ಹೋಗುತ್ತಾರೆ. ಅದು ಮಾಡಬಾರದು. ನೀವು ಮಾಡಿದ್ದೀರಿ ಎಂದು ಹೇಳುತ್ತಿಲ್ಲ. ಎಲ್ಲಾ ಮಂತ್ರಿಗಳಿಗೂ ಮಾಡಬೇಡಿ ಎಂದು ಹೇಳುತ್ತಿದ್ದೇನೆ ಪ್ರವಾಸ ಕಾಲದಲ್ಲಿ Supervision of the amount work done ಈ ಕೆಲಸಕ್ಕೋಸ್ಕರ

ಪ್ರವಾಸ ಮಾಡಬೇಕೇ ವಿನಹ ಬೆಂಗಳೂರು ಬಿಟ್ಟರೆ ಬೀದರ್, ಬೀದರ್ ಬಿಟ್ಟರೆ ಮಂಗಳೂರು, ಮಂಗಳೂರಿನಿಂದ ಮೈಸೂರು, ಮೈಸೂರಿನಿಂದ ವಾಪಸ್ ಬೆಂಗಳೂರು, ಈ ರೀತಿ ಏತಕ್ಕೆ ಪ್ರವಾಸ ಮಾಡಬೇಕು? ನಾನು ಮಂತ್ರಿಯಾಗಿ ಬಹಳ ದಿವಸ ಕೆಲಸ ಮಾಡಿದ್ದೇನೆ. ಆದರೆ ಇಂಥ ಕೆಲಸ ನಾನು ಮಾಡಲಿಲ್ಲ. ಕಾನೂನು ಪ್ರಕಾರ ಕೆಲಸ ಮಾಡುತ್ತಿದ್ದಾರೆಯೋ ಇಲ್ಲವೇ ಎಂದು ನೋಡುವುದಕ್ಕೆ ಪ್ರವಾಸ ಮಾಡಿದ್ದೇನೆಯೋ ಹೊರತು ನಿಮ್ಮ ಹಾಗೆ ಪಕ್ಷಿಗಳು ಹಾರಾಡುವ ಹಾಗೆ ಹಾರಾಡಿದರೆ ಹೇಗೆ ಸ್ವಾಮಿ? ಪ್ರವಾಸದಿಂದ ಏನಾದರೂ ಉಪಯೋಗವಾಗಬೇಕು. ಅದು ಅರ್ಥಗರ್ಭಿತವಾಗಿರಬೇಕು. ಸಾರ್ವಜನಿಕ ಹಣ ನಾವು ಖರ್ಚು ಮಾಡುವಾಗ ಅದಕ್ಕೆ ಪ್ರತಿಫಲ ಸಲ್ಲಬೇಕು. ಬೇರೆ ಉದ್ದೇಶದಿಂದ ಪ್ರವಾಸ ಮಾಡಬಾರದು. ಇಲ್ಲಿಯವರೆಗೆ ಹೇಗೋ ಮಾಡಿದ್ದೀರಿ. ಇನ್ನು ಮೇಲಾದರೂ ಜನರಿಗೆ ಉಪಯೋಗ ಆಗಬೇಕು, ಜನರ ಹಣ ಸಾರ್ಥಕವಾಗಬೇಕು ಎಂಬ ಮನೋಭಾವ ಬೆಳೆಸಿಕೊಳ್ಳಿ. ಅಧಿಕಾರಿಗಳಿಗೆ ಚಾಟಿ ಏಟು ಕೊಟ್ಟು ಬರುವ ರೀತಿಯಲ್ಲಿ ಕೆಲಸ ಮಾಡಬೇಕು. ಬೇರೆ ಅನ್ಯಾಯದ ಕೆಲಸಕ್ಕೆ ಪ್ರವಾಸ ಮಾಡಬಾರದು ಎಂದು ಹೇಳುತ್ತಿದ್ದೇನೆ. ಒಂದು ವಿಚಾರ ಹೇಳುತ್ತಿದ್ದೇನೆ. ಜನತಾ ಪಕ್ಷ ಅಧಿಕಾರಕ್ಕೆ ಬಂದಮೇಲೆ ಯಾವ ಅಧಿಕಾರಿ ಮಂತ್ರಿಗಳಿಗೆ ಹೆದರುತ್ತಾನೆ? ಯಾವ ಅಧಿಕಾರಿ ಸರ್ಕಾರದಿಂದ ಹೊರಡಿಸತಕ್ಕ ಆರ್ಡರ್‌ಗಳನ್ನು ನೋಡಿ ಕಾರ್ಯಗತ ಮಾಡುವುದಕ್ಕೆ ಮನಸ್ಸು ಮಾಡುತ್ತಿದ್ದಾನೆ ಎಂಬ ಪ್ರಶ್ನೆ ಹಾಕಿದರೆ ಯಾರೂ ಹೆದರುತ್ತಿರುವ ಅಧಿಕಾರಿಯನ್ನು ನೋಡಿಲ್ಲ. ನಾನು ಕೇರಳಕ್ಕೆ ಅಬ್ಸರ್ವರ್ ಆಗಿ ಚುನಾವಣೆಯಲ್ಲಿ ಹೋಗಿದ್ದೆ. ಗೊತ್ತಾಯಿತು, ಸರ್ಕಾರಿ ನೌಕರರು ಅಲ್ಲಿ ಎಲ್ಲಾ ರಾಜಕೀಯ ಪಕ್ಷದಲ್ಲೂ ಇದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿದ್ದಾರೆ, ಸಿ.ಪಿ.ಎಂ. ನಲ್ಲಿದ್ದಾರೆ, ಸಿ.ಪಿ.ಐ. ನಲ್ಲಿದ್ದಾರೆ ಜನಸಂಘದಲ್ಲಿದ್ದಾರೆ, ಎಲ್ಲಾ ಕಡೆ ಇದ್ದಾರೆ. ಅಲ್ಲಿನ ಗಾಳಿ ಇಲ್ಲಿ ಬೀಸಿದೆಯೋ ಏನೋ ಗೊತ್ತಿಲ್ಲ. ಆದರೆ ಜನತಾ ಪಕ್ಷ ಅಧಿಕಾರಕ್ಕೆ ಬಂದಮೇಲೆ ಎಲ್ಲಾ ಅಧಿಕಾರಿಗಳೂ ರಾಜಕೀಯ ಮಾಡುತ್ತಿದ್ದಾರೆ. ಚುನಾವಣೆಯಲ್ಲಿ ನಾವು ಸೋಲುತ್ತಾ ಇರಲಿಲ್ಲ ಸ್ವಾಮಿ. ಈ ಅಧಿಕಾರಿಗಳ ಕೈವಾಡದಿಂದ ನಾವು ಸೋತೆವು. ಈವತ್ತಿನ ದಿವಸ ನಾನು ಬಹಿರಂಗವಾಗಿ ಈ ಮಾತನ್ನು ಹೇಳಿದ್ದೇನೆ. ಈ ಅಧಿಕಾರಿಗಳು ಪೋಲಿಂಗ್ ಆಫೀಸರ್‌ಗಳಾಗಿ ಯಾರು ಯಾರು ಹೋಗಿದ್ದರು ಅವರು ಏನೇನು ಮಾಡಿದ್ದಾರೆ ಎಂಬ ವಿವರ ಇದೆ. ಈ ಅಧಿಕಾರಿಗಳು ರಾಜಕೀಯ ಮಾಡಲಿಕ್ಕೆ ಏನು ಪ್ರಯತ್ನ ಮಾಡಿದ್ದರು ಅದನ್ನು ಇವತ್ತೂ ಮುಂದುವರೆಸಿಕೊಂಡು ಬರುತ್ತಿದ್ದಾರೆ. ದಯಮಾಡಿ ಏನಾದರೂ ಪ್ರಯತ್ನ ನಡೆದಿದ್ದರೆ ಹೇಳಿ, ಮಾಡಿದ್ದರೆ ಮಾಡಿದ್ದೇವೆಂದು ಹೇಳಿ ಇಲ್ಲದಿದ್ದರೆ ಮಾಡಿಲ್ಲ ಎಂದು ಹೇಳಿದರೆ ಬಹಳ ಸಂತೋಷ. ಅದನ್ನು ಬಿಟ್ಟು ಇಂಥ ಕೆಲಸವನ್ನು ಮಾಡಬೇಡಿ. ಅಧಿಕಾರವರ್ಗ ಏನಿದ್ದಾರೆ, ಅವರು ಯಾರೇ ಅಧಿಕಾರಕ್ಕೆ ಬರಲಿ ಅವರ ಸೇವೆ ಮಾಡತಕ್ಕಂಥಾದ್ದು ಅವರ ಕರ್ತವ್ಯ. ಗಂಡನಿಗೆ ಹೆಂಡತಿ ಹೇಗೆ ಇರುತ್ತಾಳೋ ಹಾಗೆ. ಅಧಿಕಾರವರ್ಗದವರು ಬರೀ ನಟನೆ ಮಾಡುತ್ತಾರೆಯೋ ಹೊರತು, ಕೆಲಸ ಮಾಡುವುದಿಲ್ಲ ಯಾರೇ ಅಧಿಕಾರಕ್ಕೆ ಬಂದರೂ ಇವರು ಹೆಂಡತಿ ರೂಪದಲ್ಲಿ ಕಾಣುತ್ತಾರೆ. ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಅವರಿಂದ ನಿಷ್ಠೆಯಿಂದ ಕೆಲಸ ತೆಗೆದುಕೊಳ್ಳದೇ ಹೋದರೆ ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ. ತಾವು ಕಳೆದ ೫ ವರ್ಷಗಳಿಂದ ರಾಜ್ಯಭಾರ ಮಾಡುತ್ತಿದ್ದೀರಿ. ಜನರಿಗೆ ಏನೇನು ಹೇಳಿಕೊಂಡು ಬಂದಿದ್ದೀರಿ. ಮಾನ್ಯ ಖರ್ಗೆಯವರು ಮೊನ್ನೆ ಮಾತನಾಡುತ್ತಾ, ಎರಡು ಸಾವಿರ ವಾಗ್ದಾನಗಳನ್ನು ಕೊಟ್ಟಿದ್ದಾರೆ, ಅದರಲ್ಲಿ ಎಷ್ಟು ಕಾರ್ಯಗತವಾಗಿವೆ ಎಂದು ನೋಡಿದರೆ ಏನೂ ಆಗಿಲ್ಲ. ಎಷ್ಟು ಕಾರ್ಯಗತ ಮಾಡಿದ್ದೀರೆಂಬುದನ್ನು ತಾವೇ ಹೇಳಬೇಕು ತಾವು ತಾಳಿಭಾಗ್ಯ ಯೋಜನೆಯನ್ನು ತಂದಿರಿ, ಇವತ್ತು ಅದನ್ನು ಕಿತ್ತು ಹಾಕಿದಿರಿ. ಎಷ್ಟು ಜನಕ್ಕೆ ತಾಳಿ ಕೊಟ್ಟಿದ್ದೀರಿ? ಬರೀ ವಾಗ್ದಾನ ಮಾಡುವ ಬದಲು ಹಿಡಿದ ಕೆಲಸವನ್ನು ಚನ್ನಾಗಿ ಮಾಡಿದರೆ, ಜನ ಮೆಚ್ಚುತ್ತಾರೆ, ತಮ್ಮ ಬೆನ್ನು ತಟ್ಟುತ್ತಾರೆ. ಬರೀ ವಾಗ್ದಾನ ಮಾಡಿಕೊಂಡು ಹೋದರೆ. ಯಾವ ಕೆಲಸವೂ ಆಗದೇ ಇದ್ದರೆ, ಇದು ಜನರ ಮನಸ್ಸಿಗೆ ಬಂದಾಗ, ತಾವು ಏನು ಜನಗಳ ಬೆಂಬಲ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಇರುತ್ತೇವೆಂದು ಏನು ಹೇಳುತ್ತೀರಿ, ಅದೆಲ್ಲಾ ವಾಪಸ್ಸಾಗುತ್ತದೆ. ಮೊದಲು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿ. ಇನ್ನು ರಾಜಕೀಯ ಪಕ್ಷಗಳವರು ಹಣ ವಸೂಲು ಮಾಡುತ್ತಾರೆ. ಮನುಷ್ಯ ಉದಾರವಾಗಿ ಸಹಾಯ ಮಾಡಬೇಕು, ಇವತ್ತು ಎಲ್ಲರಿಗೂ ದಾನ ಕೊಡುತ್ತಾ ಹೋಗುತ್ತಿದ್ದೀರಿ. ಜಯಪ್ರಕಾಶ್ ನಾರಾಯಣ್ ಸ್ಮಾರಕ ನಿಧಿಗೆ ೪೫ ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಇದು ಯಾರಪ್ಪನ ಮನೆ ಗಂಟು? ಸಾರ್ವಜನಿಕರ ಹಣವನ್ನು ಯಾರನ್ನು ಕೇಳಿ ಕೊಟ್ಟಿರಿ?

ಶ್ರೀ ಎಂ. ಚಂದ್ರಶೇಖರ್.—ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರ ಬಂದಾಗ ಮಾತನಾಡಬಹುದು.

ಶ್ರೀ ಬಿ. ಬಸವಲಿಂಗಪ್ಪ.—ನಾನು ಈ ವಿಷಯವನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ರಾಜಕೀಯ ಪಕ್ಷಗಳು ಇಂಥ ಅಧಿಕಾರಿಗಳನ್ನು ಉಪಯೋಗಿಸಿಕೊಂಡು, ಹಣ ವಸೂಲು ಮಾಡಿ, ಇಂಥಾದ್ದು ಉದಾರವಾಗಿ ದಾನ ಮಾಡಲಿಕ್ಕೆ ಹೋಗಬೇಡಿ ಎಂದು ಹೇಳುತ್ತಿದ್ದೇನೆ. ಜನರಲ್ ಅಡ್ಮಿನಿಸ್ಟ್ರೇಷನ್ ಬೇರೆ, ಇದು ಬೇರೆ. ದಾನ ಮಾಡಿ ಈ ದೇಶದಲ್ಲಿ ಯಾರೂ ನಮ್ಮ ಹಾಗೆ ಇಲ್ಲ ಎನ್ನುವ ಶಹಭಾಷಗಿರಿ ತೆಗೆದುಕೊಳ್ಳುವ ಕೆಲಸ ಮಾಡಬೇಡಿ.

ನೀವು ಹೇಗೆ ಬೇಕಾದರೂ, ಯಾವ ರೂಪದಲ್ಲಿಯಾದರೂ ಅಧಿಕಾರ ವಿಕೇಂದ್ರೀಕರಣ ಮಾಡಿಕೊಳ್ಳಿ. ನಿಮಗೆ ಏನು ಬೇಕೋ ಅದನ್ನು ಇಟ್ಟುಕೊಳ್ಳಿ. ಅವಶ್ಯಕವಾದಂಥ, ಅನಿವಾರ್ಯ ವಾದಂಥ, ಸಂಕಷ್ಟಕ್ಕೆ ಒಳಗಾಗಿರುವಂಥ ಸಂದರ್ಭದಲ್ಲಿ ಅಧಿಕಾರಿಗಳನ್ನು ವರ್ಗ ಮಾಡಿ, ಲೋಕೋಪಯೋಗಿ ಇಲಾಖೆ ವಿಚಾರದಲ್ಲಿ ಹೇಳುವುದಾದರೆ, ಮಾನ್ಯ ದೇವೇಗೌಡರು ಬಹಳ ಉದಾರಿಗಳು, ಅವರು ಈಗ ನಾಯಕರಾಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಮೊದಲಿನಿಂದಲೂ ನಾಯಕರಿದ್ದಾರೆ. ವಿರೋಧ ಪಕ್ಷದ ನಾಯಕರಾಗಿದ್ದರು, ಜನತಾ ಪಕ್ಷದ ಅಧ್ಯಕ್ಷರಾಗಿದ್ದರು.

ಶ್ರೀ ಬಿ. ಬಸವಲಿಂಗಪ್ಪ.—ಈಗ ಅವರು ನಾಯಕರಾಗಿದ್ದಾರೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದ್ದಾಗ ನಿಮ್ಮ ವರ್ಗದ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರಿಗೆ ಮೂರು ವರ್ಷ ಅವಧಿಯಾದ ಮೇಲೆ ಎಕ್ಸಿಕ್ಯುಟೀವ್ ಇಂಜಿನಿಯರ್ ಆಗಿ ಬಡ್ತಿ ಕೊಡಬೇಕೆಂದು ಮಾಡಿದ್ದೆವು. ಲೋಕೋಪಯೋಗಿ ಇಲಾಖೆ ನೀರಾವರಿ ಇಲಾಖೆಗಳಲ್ಲಿ ಅವರಿಗೆ ಸಾಕಷ್ಟು ಪ್ರಾತಿನಿಧ್ಯತೆ ಇಲ್ಲವೆಂದು ಮೀಸಲಾತಿ ಆಧಾರದ ಮೇಲೆ ಈ ಯೋಜನೆಗಳನ್ನು ಮಾಡಿ ಈ ಮೂಲಕ ಅವರಿಗೆ ಬಡ್ತಿ ಕೊಡಬೇಕೆಂದು ಮಾಡಿದೆವು. ಆದರೆ ಇವರು ಕಾಲು ಇಟ್ಟರು. ಲೋಕೋಪಯೋಗಿ ಇಲಾಖೆಯಲ್ಲಿ ಅದು ಹೋಯಿತು. ನೇಮಕಾತಿಯಲ್ಲಿ ನಾವೂ ಕೂಡಾ 23 ಪರ್ಸೆಂಟ್ ರಿಸರ್ವೇಷನ್ ಇಟ್ಟಿದ್ದೇವೆಂದು ಭಾಷಣ ಮಾಡಿದರು. ಅವೊತ್ತಿನಿಂದ ಇವತ್ತಿನವರೆಗೂ ಈ ಸರ್ಕಾರದವರು ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳ ನೇರ ನೇಮಕಾತಿಯನ್ನು ಮಾಡಿಲ್ಲ ಜೂನಿಯರ್ ಇಂಜಿನಿಯರ್‌ಗಳನ್ನು ಮಾಡಿದ್ದಾರೆ.

ಅಧ್ಯಕ್ಷರು.— ರಷೀದ್‌ರವರ ಕೊಲೆಗೆ ಸಂಬಂಧಪಟ್ಟಂತೆ ಇವೊತ್ತೇ ಚರ್ಚೆಯನ್ನು ಮುಗಿಸೋಣವೇ ಇಲ್ಲದಿದ್ದರೆ ನಾಳೆ ಅಥವಾ ನಾಡಿದ್ದು ತೆಗೆದುಕೊಳ್ಳೋಣ.

ಶ್ರೀ ಬಿ. ಬಸವಲಿಂಗಪ್ಪ.—ಇವತ್ತು ರಷೀದ್ ಪ್ರಕರಣವನ್ನು ತೆಗೆದುಕೊಳ್ಳಿ ನಾಳೆ ನಾನು ಮುಂದುವರಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಬರುವ ತನಕ ತಾವು ಮಾತನಾಡಿ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ವರ್ಗದವರ ಬಗ್ಗೆ ಭಾರಿ ಮಾತುಗಳನ್ನು ಆಡಿಬಿಟ್ಟೀರಿ, ಜಗ್ಗಿದ್ದನಗಳನ್ನು ಮಾಡಿದ್ದೀರಿ, ಆದರೆ ಮೊದಲು ನಿಮ್ಮ ವರ್ಗದ ಅಧಿಕಾರಿಗಳಿಗೆ ಆಗಿರುವ ಅನ್ಯಾಯಗಳನ್ನು ನೀವು ಸರಿಪಡಿಸಬೇಕು. ಈಗ ಹೊಸದಾಗಿ ಮಂತ್ರಿಗಳು ಬಂದಿದ್ದಾರೆ ಅವರು ಪರಿಶೀಲನೆ ಮಾಡಲಿ ಕಾಂಗ್ರೆಸ್ ಸರಕಾರದವರು ಮಾಡಿರತಕ್ಕಂತಹ ನೀತಿ ಏನು ಇತ್ತು ಮೂರು ವರ್ಷದಿಂದ ಯಾರು ಯಾರು ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳು ಇದ್ದಾರೆ ಅವರಿಗೆ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳಾಗಿ ಬಡ್ತಿ ಕೊಡಲಿಕ್ಕೆ ಹಿಂದೆ ಅಂದರೆ ಕಾಂಗ್ರೆಸ್ ಸರಕಾರವಿದ್ದಾಗ ಏನು ಹುಕುಂ ಇತ್ತು ಅದನ್ನು ಮತ್ತೆ ಜಾರಿಗೆ ತರಬೇಕು ಎಂದು ನಾನು ತಮ್ಮ ಮೂಲಕ ಸಚಿವರನ್ನು ಕೇಳಿಕೊಳ್ಳುತ್ತೇನೆ. ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ಸ್ ನಿಮ್ಮ ವರ್ಗದಲ್ಲಿ ಯಾರು ಇದ್ದಾರೆ ಅವರಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂದು ಹಿಂದೆ ಕಾಂಗ್ರೆಸ್ ಸರಕಾರವಿದ್ದಾಗ 23 ಪರ್ಸೆಂಟ್ ನಿಮ್ಮ ವರ್ಗದ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ಸ್‌ಗಳನ್ನು ನೇರ ನೇಮಕಾತಿ ಮಾಡಬೇಕು ಎಂದು ನಿರ್ಣಯ ಮಾಡಿದೆವು to fill up backlog vacancies... ಆದರೆ ಈ ಸರಕಾರ ಬಂದ ಮೇಲೆ ಇವತ್ತಿನವರೆಗೂ ಕೂಡ ನೇರ ನೇಮಕಾತಿಯನ್ನು ಮಾಡಿಲ್ಲ. ಕಾಂಗ್ರೆಸ್ ಸರಕಾರ

ವಿದ್ದಾಗ ಏನು ಹೈಕೋರ್ಟ್, ಸುಪ್ರೀಂ ಕೋರ್ಟಿಗೆ ಹೋಗಿ ಅಲ್ಲಿ ತೀರ್ಮಾನವಾದರೂ ಕೂಡ ಈ ಸರ್ಕಾರ ಇದರ ಬಗ್ಗೆ ನಿರ್ಣಯವನ್ನು ಮಾಡಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ನಾನು ತಮಗೆ ಡಿಸ್ಟರ್ಬ್ ಮಾಡುವುದಿಲ್ಲ ಕೆಲವು ಮಾತುಗಳನ್ನು ಮಾತ್ರ ಹೇಳುತ್ತೇನೆ. ನಿಮ್ಮ ಭಾಷಣ ಹೇಗಿದೆ ಎಂದರೆ ಚುನಾವಣಾ ಭಾಷಣವಿದ್ದ ಹಾಗೆ ಇದೆ. ನಾನು ಮೊದಲಿನಿಂದ ತಮ್ಮ ಭಾಷಣವನ್ನು ಕೇಳಿದ್ದೇನೆ. ಲೋಕೋಪಯೋಗಿ ಇಲಾಖೆಯ ಮೇಲೆ ನಾನು ಅಲ್ಲಿ ಕುಳಿತು ಭಾಷಣ ಮಾಡಿದ್ದೇನೆ ಆರೋಪ ಮಾಡತಕ್ಕಂಥಹ ಕಾಲದಲ್ಲಿ ಸರಿಯಾದಂಥ ಮೆಟೀರಿಯಲ್ಸ್ ಇಟ್ಟುಕೊಂಡು ಮಾಡಬೇಕು. ೨೫ ಜನರನ್ನು ನೇರ ನೇಮಕಾತಿ ಮಾಡಬೇಕೆಂದು ಯಾವಾಗ ತೀರ್ಮಾನ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ ಬಸವಲಿಂಗಪ್ಪ.— ೧೯೭೮-೮೦ನೇ ಇಸವಿಯಲ್ಲಿ ಮಾಡಿದ್ದೇವೆ. ಗವರ್ನ್‌ಮೆಂಟ್ ಆರ್ಡರ್ ಬೇಕೇ ? ಹೈಕೋರ್ಟಿನ ಕೇಸ್ ನಂಬರ್, ಸುಪ್ರೀಂ ಕೋರ್ಟಿನಲ್ಲಿದ್ದ ಕೇಸ್ ನಂಬರ್ ಬೇಕೇ?

ಶ್ರೀ ಹೆಚ್. ಡಿ. ದೇವೇಗೌಡ.—೧೯೭೮-೭೯ ಅಥವಾ ೮೧ರಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳನ್ನು ನೇರ ನೇಮಕಾತಿ ಮಾಡಬೇಕೆಂದು ಹಿಂದಿನ ಸರಕಾರ ತೀರ್ಮಾನ ಮಾಡಿರುವುದಕ್ಕೆ ಸಂಬಂಧಪಟ್ಟಂಥ ದಾಖಲಾತಿಯನ್ನು ಈ ಸಭೆಯಲ್ಲಿ ತಾವು ಇಡುವುದಾದರೆ ನಾನು ಈ ಸಭೆಯಲ್ಲಿ ಸಾರ್ವತ್ರಿಕವಾಗಿ ಕ್ಷಮೆ ಕೇಳಲಿಕ್ಕೆ ಸಿದ್ಧನಿದ್ದೇನೆ. ೧೯೭೧ ರಿಂದ ೮೩ರವರೆಗೆ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಬ್ಯಾಕ್‌ಲಾಗ್ ೨೫ ವೇಕೆನ್ಸಿಯನ್ನು ಕೊಡಬೇಕೆಂದು ಹೇಳಿ ಹಿಂದಿನ ಸರಕಾರ ಮಾಡಿದ್ದು, ಅದನ್ನು ಈ ರಾಜ್ಯದಲ್ಲಿ ನೀವೇ ನಿಲ್ಲಿಸಿದಿರಿ. ಇದನ್ನು ಮಾಡಿದ್ದು ನಾನಲ್ಲ ಅದನ್ನು ನಾನು ನಿಲ್ಲಿಸಿದ್ದರೆ ಸಾರ್ವತ್ರಿಕವಾಗಿ ಕ್ಷಮೆ ಕೇಳುತ್ತೇನೆ.

೧೯೭೦ರಿಂದ ೧೯೮೩ರವರೆಗೆ ಯಾರು ಅಧಿಕಾರದಲ್ಲಿದ್ದರು ? ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಪ್ರೊಬೆಷನರಿಯಾಗಿ ತೆಗೆದುಕೊಳ್ಳತಕ್ಕದ್ದನ್ನು ನಿಲ್ಲಿಸಿದಂತಹ ಕೀರ್ತಿ ಹಿಂದಿನ ಸರ್ಕಾರಗಳಿಗೆ ಹೋಗಬೇಕು ಅದನ್ನು ರಿವ್ಯೂ ಮಾಡಬೇಕೆಂದು ಮಾಡಿದ್ದುದು ಜನತಾ ಸರ್ಕಾರ. ದುರ್ದೈವವೆಂದು ಹೇಳಬೇಕಾಗುತ್ತದೆ ಹೈಕೋರ್ಟ್‌ನಿಂದ ಸ್ಟೇ ತಂದರು. ಇಲ್ಲಿ ಲಾ ಮಿನಿಸ್ಟರ್ ಇದ್ದಾರೆ. ಇವತ್ತು ನಾನು ಅಧಿಕಾರ ಬಿಟ್ಟಿದ್ದೇನೆ. ಇದನ್ನು ದೇವೇಗೌಡರು ನಿಲ್ಲಿಸಿದರು ಎಂದು ಹೇಳುವಂತಹ ಅಪಪ್ರಚಾರ ಗ್ಲೋಬಲ್ ಪ್ರಾಪಗ್ಯಾಂಡ್ ಮಾಡತಕ್ಕವರು ಈ ಸಭೆಯಲ್ಲಿ ಇದ್ದಾರೆ. ಲಾ ಡಿಪಾರ್ಟ್‌ಮೆಂಟ್ ಮತ್ತು ಲಾ ಸೆಕ್ರೆಟರಿಯವರು ಏನು ಕೆಲಸ ಮಾಡುತ್ತಾರೆ ? ಈ ಸಭೆಗೆ ಉತ್ತರ ಕೊಡಬೇಕು, ನಾನು ೫೦ ಜನರನ್ನು ಲೋಕಸೇವಾ ಆಯೋಗದ ಮುಖಾಂತರ ನೇರವಾಗಿ ಅಪಾಯಿಂಟ್ ಮಾಡಬೇಕೆಂದು ಮಾಡಿದೆ, ಆ ಬಗ್ಗೆ ನೋಟಿಫಿಕೇಶನ್ ಹೊರಡಿಸಿದೆ. ಅದಕ್ಕೆ ಹೈಕೋರ್ಟ್‌ನಲ್ಲಿ ಸ್ಟೇ ಮಾಡಿದರು. ಸ್ಟೇ ಮಾಡುವುದಕ್ಕೆ ಮೊದಲು ನಾನು ೪ ಸಾರಿ ಹೇಳಿದ್ದೇನೆ, ಇವತ್ತು ನಾನು ಅಧಿಕಾರದಲ್ಲಿಲ್ಲ, ಅದನ್ನು ನಿಲ್ಲಿಸತಕ್ಕ ಹೀನ ಕೆಲಸವನ್ನು ಮಾಡಿದವನು ನಾನಲ್ಲ, ಇವತ್ತು ಇಲ್ಲಿ ಕುಳಿತುಕೊಂಡು ಅವರೇ ಪ್ರಚಾರ ಮಾಡುತ್ತಿದ್ದಾರೆ. ದೇವೇಗೌಡರು ನಿಲ್ಲಿಸಿದರು ಎಂದು ಹೇಳುತ್ತಿದ್ದಾರೆ, ನಾನು ಅಷ್ಟು ಕೆಳಮಟ್ಟದ ರಾಜಕಾರಣ ಮಾಡುವುದಿಲ್ಲ. ನಾನು ಒಂದು ಮಾತನ್ನು ಹೇಳುತ್ತೇನೆ, ಹಿಂದೂಸ್ಥಾನದ ಇತಿಹಾಸದಲ್ಲಿ ಶೇಕಡ ೨೫ರಷ್ಟು ಹುದ್ದೆಗಳನ್ನು ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದುದು ಕೇವಲ ಒಂದು ಹುದ್ದೆಗಲ್ಲ, ಡ್ರಾಫ್ಟ್ಸ್‌ಮನ್ ಇರಬಹುದು, ಅಸಿಸ್ಟೆಂಟ್ ಇಂಜಿನಿಯರ್ ಇರಬಹುದು, ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಇರಬಹುದು, ಅಥವಾ ಜೂನಿಯರ್ ಇಂಜಿನಿಯರ್ ಇರಬಹುದು ಶೇಕಡ ೨೫ರಷ್ಟು ಕೊಡಬೇಕೆಂದು ಹೇಳಿ ನೇರವಾಗಿ ನೇಮಕ ಮಾಡಬೇಕೆಂದು ಆಜ್ಞೆ ಹೊರಡಿಸಿದ್ದೇವೆ. ಹಿಂದೆ ಒಂದು ತೀರ್ಮಾನ ಮಾಡಿದ್ದಾರೆ ದೇವರಾಜ ಅರಸ್‌ರವರ ಕಾಲದಲ್ಲಿ ಮೂರು ವರ್ಷ ಅಲ್ಲ ಐದು ವರ್ಷ ಎಂದು ಇತ್ತು. ನಾವು ಇದನ್ನು ೫ ವರ್ಷದಿಂದ ೩ ವರ್ಷಕ್ಕೆ ಇಳಿಸಿದ್ದೇವೆ. ಒನ್ ಟೈಮ್ ಕನ್ಸೆಷನ್ ಕೊಡಬೇಕೆಂದು ಕ್ಯಾಬಿನೆಟ್ ರೆಸಲ್ಯೂಷನ್ ಮಾಡಿದ್ದಾರೆ. ನಾವು ಅಧಿಕಾರಕ್ಕೆ ಬಂದ ಮೇಲೆ ಟು ಟೈಮ್ ಕನ್ಸೆಷನ್ ಕೊಟ್ಟಿದ್ದೇವೆ. ನೇರ ನೇಮಕಾತಿಯಲ್ಲಿ ಬಹಳ ಕೇಟಗರೀಸ್—below the category of Assistant Executive Engineers till 18% quota is going to be completed .....ಅದು ಮೂರು ವರ್ಷ ಆಗಬಹುದು, ೫ ವರ್ಷ ಆಗಬಹುದು ೧೦-೧೫ ವರ್ಷ ಆಗಬಹುದು ಈ ದಿಸೆಯಲ್ಲಿ ನಾವು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಅಸಿಸ್ಟೆಂಟ್ ಇಂಜಿನಿಯರ್‌ಗಳನ್ನು ೧೪೫ ಜನಗಳಿಗೆ ಒಂದೇ ಸಾರಿ ಅಪಾಯಿಂಟ್ ಮಾಡಿದ್ದೇವೆ. ಅಪಾಯಿಂಟ್‌ಮೆಂಟ್ ಮಾಡು

ವಾಗ ಷೆಡ್ಯೂಲ್ಡ್ ಕಾಸ್ಟ್ ಒಬ್ಬ ಹುಡುಗ ಕೂಡ ಉಳಿದಿಲ್ಲ. ಆ ಕಮಿಟಿಯಲ್ಲಿ ಕೆಲಸ ಮಾಡಿದಂತಹ ಕುಮಾರಸ್ವಾಮಿಯವರು ಇಲ್ಲಿಯೇ ಇರಬಹುದು. ನಾನು ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇತ್ತೀಚೆಗೆ ಏನಾಗಿದೆ ಅಂದರೆ ಪೇಸ್ಕೇಲ್ ಇನ್‌ಕ್ರೀಸ್ ಆದಾಗ ಒಂದು ಘಟನೆ ನಡೆದಿದೆ. ಅದರ ಮೇಲೆ ಕ್ಯಾಬಿನೇಟ್ ಸಬ್ ಕಮಿಟಿ ಮಾಡಿ ಇದು ಎಲ್ಲಾ ಇಲಾಖೆಗಳಿಗೆ ಅನ್ವಯವಾಗಬೇಕೇ ಅಥವಾ ಕೇವಲ ಲೋಕೋಪಯೋಗಿ ಇಲಾಖೆಗೆ ಮಾತ್ರ ಅನ್ವಯ ಆಗಬೇಕೇ ಎನ್ನುವುದು ಇದೆ. ಈ ಬಗ್ಗೆ ಕ್ಯಾಬಿನೇಟ್ ಸಬ್ ಕಮಿಟಿಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಮುಂದೆ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳುತ್ತದೋ ನನಗೆ ಗೊತ್ತಿಲ್ಲ, ನಾನು ಕ್ಯಾಬಿನೇಟ್‌ನಲ್ಲಿ ಇಲ್ಲ. ನಾನು ಆ ಬಗ್ಗೆ ವಾದ ಮಾಡುವುದಕ್ಕೆ ಹೋಗುವುದಿಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ದೇವೇಗೌಡರು ಬಹಳ ದಿವಸಗಳಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಅದೇ ರೀತಿ ಬಹಳ ದಿವಸಗಳಿಂದ ಕೆಲಸ ಮಾಡಿದ್ದೇನೆ ನಾನು ಏನೇ ಮಾತನಾಡಿದರೂ ಜವಾಬ್ದಾರಿಯಿಂದ ಮಾತನಾಡಲೇಬೇಕು. ಅವರು ಅದೇ ರೀತಿ ಮಾತನಾಡಲೇ ಬೇಕು ಮಾತನಾಡಿದ್ದಾರೆ. ನಾನು ಸ್ಪಷ್ಟವಾಗಿ ತಮಗೆ ಹೇಳುತ್ತಿದ್ದೇನೆ. ೧೯೮೩ನೇ ಇಸವಿಗಿಂತ ಹಿಂದೆ ಇದ್ದ ಕಾಂಗ್ರೆಸ್ ಸರ್ಕಾರ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಶೇಕಡ ೨೫ರಷ್ಟು ಹುದ್ದೆಗಳನ್ನು ನೇರವಾಗಿ ನೇಮಕ ಮಾಡಬೇಕೆಂದು ಕ್ಯಾಬಿನೇಟ್ ನಿರ್ಣಯ ಮಾಡಿದಾಗ ಅದರಲ್ಲಿ ನಾನೂ ಒಬ್ಬ ಸದಸ್ಯ. ನಾಳೆ ಮಾತನಾಡುವಾಗ ಆ ಬಗ್ಗೆ ವಿವರಗಳನ್ನು ಕೊಡುತ್ತೇನೆ. ಅದೇನಾಯಿತು ಅಂದರೆ ನಾವು ಆ ರೀತಿ ಭರ್ತಿ ಮಾಡಲಿಕ್ಕೆ ಪ್ರಯತ್ನ ಮಾಡಿದಾಗ ಕೆಲವರು ಹೈಕೋರ್ಟ್‌ಗೆ ಹೋಗಿ ಸ್ಟೇ ಆರ್ಡರ್ ತಂದರು. ಅದು ಒಂದು ವರ್ಷ ಜಾರಿಯಲ್ಲಿತ್ತು. ಅದುವರೆಗೆ ಆದದ್ದು ಅಷ್ಟೆ. ಇವರ ಐದು ವರ್ಷಗಳಲ್ಲಿ ನೇರವಾಗಿ ನೇಮಕಾತಿಯನ್ನು ಮಾಡಿದ್ದೇವೆಂದು ಹೇಳಿದರೆ ಶಹಭಾಷ್‌ಗಿರಿ ಕೊಡುತ್ತೇನೆ. ಅದನ್ನು ನೀವು ಮಾಡಿಲ್ಲ. ೧೯೭೦ನೇ ಇಸವಿಯಿಂದ ೧೯೮೩ನೇ ಇಸವಿ ಇವತ್ತಿನವರೆಗೆ ನೇರವಾಗಿ ನೇಮಕಾತಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳನ್ನು ಸರ್ಕಾರದವರು ಮಾಡಿಲ್ಲ. ಕಾಂಗ್ರೆಸ್ ಸರ್ಕಾರದವರಾಗಲೀ ಜನತಾ ಸರ್ಕಾರದವರಾಗಲೀ ನೇರ ನೇಮಕಾತಿ ಮಾಡಿಲ್ಲ. ಶೇಕಡ ೨೫ರಷ್ಟು ಮೀಸಲಾತಿಯನ್ನು ಇಟ್ಟಿದ್ದೇವೆಂದು ತಾವು ಹೇಳಿದ್ದೀರಿ. ಇಟ್ಟಿದ್ದೀರಿ, ಸರ್ಕಾರಿ ಹುಕುಂ ಮಾಡಿದ್ದೀರಿ ನಿಮಗೆ ಧನ್ಯವಾದಗಳು. ಆದರೆ ನೀವು ಯಾವ ಕಾರಣಕ್ಕೋಸ್ಕರ ಕಾಮಗಾರಿ ಇಲಾಖೆಯನ್ನು ಬಿಟ್ಟು ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟಿರೋ ಅದೇ ಕಾರಣದಿಂದ ಹೇಳುತ್ತಿದ್ದೇನೆ. ನೇರ ನೇಮಕಾತಿಯನ್ನು ಮಾಡಿದರೆ ಸರ್ಕಾರಿ ನೌಕರರಿಗೆ ಅದರಲ್ಲಿ ಪರ್ಸೆಂಟೇಜ್ ಬರುತ್ತದೆ. ನೇಮಕಾತಿ ಮಾಡದಿದ್ದರೆ ಹೇಗೆ ಬರುತ್ತದೆ ?

೪—೦೦ ಪಿ.ಎಂ.

ಶ್ರೀ ಹೆಚ್ ಡಿ. ದೇವೇಗೌಡ.— ನಾನು ಅಸಿಸ್ಟೆಂಟ್ ಇಂಜನಿಯರ್ಸ್, ಜೂನಿಯರ್ ಇಂಜನಿಯರ್ಸ್. ಸಾವಿರಕ್ಕಿಂತ ಹೆಚ್ಚು ಮಾಡಿದ್ದೇನೆ. ನನ್ನ ಹತ್ತಿರ ಫಿಗರ್ಸ್ ಇಲ್ಲ ಇಷ್ಟು ಹುದ್ದೆಗಳನ್ನು ಭರ್ತಿ ಮಾಡುವಾಗ ೨೫ ಪರ್ಸೆಂಟ್ ನೇಮಕಾತಿಯಲ್ಲಿ ಇವತ್ತು ಮಾಡಿದ್ದೇವೆ, ಜೂನಿಯರ್ ಇಂಜನಿಯರ್ ಇರಬಹುದು, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಇರಬಹುದು, ಈ ಎಲ್ಲಾ ಹುದ್ದೆಗಳಲ್ಲಿ ೨೫ಪರ್ಸೆಂಟ್‌ನೇಮಕಾತಿಯಲ್ಲಿ ಮೀಸಲಾತಿಯನ್ನು ಕೊಟ್ಟಿದ್ದೇವೆ ಇದು ಬರೀ ಪೇಪರ್ ಆರ್ಡರ್ ಅಲ್ಲ. ಫಿಲ್ ಅಪ್ ಮಾಡಿದ್ದೇವೆ. ಚೀಫ್ ಇಂಜಿನಿಯರ್ ಅವರು ಇಲ್ಲಿ ಇರಬಹುದು, ಇನ್ನೊಮ್ಮೆ ಬೇಕಾದರೆ ವಿವರಗಳನ್ನು ತರಿಸಿ ಸಭೆಯ ಮುಂದೆ ತಮಗೆ ಕೊಡುತ್ತೇನೆ. ಆಗ ನೀವು ಹೇಳಿ. ಆದರೆ ಎಕ್ಸಿಕ್ಯೂಟಿವ್ ಇಂಜನಿಯರ್‌ಗಳು ಕೆ.ಪಿ.ಸಿ.ಯವರು ಏನು ನೋಟಿಫೈ ಮಾಡಿದರು ಅವಕ್ಕೆ ಹೈಕೋರ್ಟಿನಿಂದ ಸ್ಟೇ ತಂದರು. ಲಾ ಮಿನಿಸ್ಟರ್ ಇಲ್ಲಿಯೇ ಇದ್ದಾರೆ. ಅದನ್ನು ತೆರವು ಮಾಡಬೇಕೆಂದು ಹೇಳಿದಿವಿ. ಅದು ಆಗಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗ ತಾವು ಹೇಳಿದಿರಿ. ಆದರೆ ಗೆಜೆಟೆಡ್ ಪೋಸ್ಟ್ ಇರತಕ್ಕಂಥಾದ್ದು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜನಿಯರ್ ಅದನ್ನು ಕೆ.ಪಿ.ಸಿ.ಯಿಂದ ಭರ್ತಿ ಮಾಡಬೇಕೆನ್ನುವ ನಿರ್ಣಯವನ್ನು ತಾವು ತೆಗೆದುಕೊಂಡಿರಿ ತೆಗೆದುಕೊಂಡ ಮೇಲೆ ಏನು ಆಯಿತು ? ಅವರು ಕೆಲವು ಜನ ಜೂನಿಯರ್‌ಗಳು ಹೈಕೋರ್ಟಿನಿಂದ ಸ್ಟೇ ತಂದರು. ಈ ಸ್ಟೇ ಅನ್ನು ವೆಕೇಟ್ ಮಾಡುವುದಕ್ಕೆ ಐದು ವರ್ಷ ಬೇಕೇ ನಿಮಗೆ? ಲಾ ಡಿಪಾರ್ಟ್‌ಮೆಂಟ್ ಇರಲಿ, ಸರ್ಕಾರಕ್ಕೆ ೫ವರ್ಷ ಬೇಕೆ ಸ್ಟೇ

ಅನ್ನು ವರ್ಕೇಟ್ ಮಾಡುವುದಕ್ಕೆ? ಬೇರೆ ಕೆಲಸ ಇದ್ದರೆ ನೀವು ತಕ್ಷಣ ಕೆವಿಯೇಟ್ ಹಾಕಿ ಅಥವಾ ಅಡ್ವೋಕೇಟ್ ಜನರಲ್ ಅವರಿಗೆ ಹೇಳಿ ಬಿಡಿಸಿ ಬಿಡುತ್ತೀರಿ. ಇದರ ಬಗ್ಗೆ ಏಕೆ ಆಸಕ್ತಿ ವಹಿಸಲಿಲ್ಲ ? ತಮಗೆ ಗೊತ್ತಿರುವ ಹಾಗೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ನೇರವಾಗಿ ಅಪಾಯಿಂಟ್ ಆದರೆ ಮುಂದೆ ಚೀಫ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗುವುದಕ್ಕೆ ಬರುತ್ತದೆ. ಆದರೆ ಜ್ಯೂನಿಯರ್ ಇಂಜಿನಿಯರ್ ಚೀಫ್ ಇಂಜಿನಿಯರ್ ಆಗುವುದಕ್ಕೆ ಸಾಧ್ಯ ಇದೆಯೇ ? ಇದಕ್ಕೆ ಸರ್ಕಾರ, ಲಾ ಡಿಪಾರ್ಟ್‌ಮೆಂಟ್‌ನವರು ಮನಸ್ಸು ಮಾಡಲಿಲ್ಲ, ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ಹೈಪವರ್ ಕಮಿಟಿ ಎಂದು ಇತ್ತು, ಇಂಪ್ಲಿಮೆಂಟಿಂಗ್ ದಿ ರಿಸರ್ವೇಶನ್ ಪಾಲಿಸಿ ಎಂದು, ಅದನ್ನು ಕೂಡ ಕರೆಯಿಸಲಿಲ್ಲ. ಅಂದರೆ ನಿಮಗೆ ಏನು ಆಸಕ್ತಿ ಇದೆಯೆಂದು ಹೇಳಬೇಕೇ ? ಎರಡನೆಯದು ಒನ್‌ಟೈಮ್ ಏಕೆ ಮಾಡಿದ್ದುದು ಎಂದರೆ ಈ ಡಿಪಾರ್ಟ್‌ಮೆಂಟ್‌ನಲ್ಲಿ ಪ್ರಮೋಶನ್ ಕೊಡತಕ್ಕಂಥಾದ್ದು ಆ ತರಹ ಇರಲಿಲ್ಲ. ಅಂದರೆ ರಿಸರ್ವೇಶನ್ ಇನ್ ಪ್ರಮೋಶನ್ ಆದರೆ ಏನು ಆಯಿತು ? ಕನಿಷ್ಠಪಕ್ಷ ಒಂದು ಸಾರಿಯಾದರೂ ಇದನ್ನು ಒಪ್ಪಿಕೊಂಡು ಮಾಡಿಬಿಡೋಣ ಎಂದು ಹೇಳಿ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ನಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಪ್ರಮೋಶನ್ ಕೊಡಬೇಕಾದರೆ ಮಿನಿಮಮ್ ಮೂರು ವರ್ಷವಾದರೂ ಸರ್ವೀಸ್ ಇರಬೇಕು ಎಂದು ನಿರ್ಣಯ ತೆಗೆದುಕೊಂಡು ಒಟ್ಟಾಗಿ ಮಾಡಿಬಿಟ್ಟೆವು. ಇದರ ಅರ್ಥ ಬೇರೆ ಡಿಪಾರ್ಟ್‌ಮೆಂಟ್‌ನಲ್ಲಿ ಮಾಡಬಾರದು ಎಂದು ಎಲ್ಲಿದೆ ? ಕ್ಯಾಬಿನೆಟ್ ಮನಸ್ಸು ಮಾಡಿದರೆ ಆ ಎಕ್ಸ್‌ಟೆನ್‌ಶನ್ ಏನಿದೆ ಅದನ್ನು ಪರ್ಮನೆಂಟ್ ಮಾಡಬಹುದು ೧೮ ಪರ್ಸೆಂಟ್ ಫಿಲ್‌ಅಪ್ ಆಗುವವರೆಗೆ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್, ಸೂಪರಿಂಟೆಂಡೆಂಟ್ ಇಂಜಿನಿಯರ್ ಪೋಸ್ಟ್‌ನಲ್ಲಿ ನಾವು ಮಾಡಬೇಕೆಂದು ತೀರ್ಮಾನ ಮಾಡಿದರೆ ಮಾಡಬಹುದಾಗಿತ್ತು. ಸ್ವಲ್ಪವೇ ವ್ಯತ್ಯಾಸ ಆಗಿದೆ ಎಂಬ ಕಾರಣದಿಂದ ಇದಕ್ಕೆ ಮೂರು-ನಾಲ್ಕು ವರ್ಷ ತಡ ಏಕೆ ಬೇಕು.

ಶ್ರೀ ಹೆಚ್. ಡಿ. ದೇವೇಗೌಡ.— ನಾನು ಪದೇ ಪದೇ ಇಂಟರ್‌ಫಿಯರ್ ಆಗುವುದಕ್ಕೆ ಇಷ್ಟಪಡುವುದಿಲ್ಲ. ೧೯೭೮ರಲ್ಲಿ ಶ್ರೀ ಖರ್ಗೆಯವರು ಮರೆತಿರಬಹುದೋ ಏನೋ. ದಿವಂಗತ ದೇವರಾಜ ಅರಸು ಅವರ ಕಾಲದಲ್ಲಿ ರೋಸ್ಟರ್ ಸಿಸ್ಟಮ್ ಅನ್ನು ತೆಗೆದುಕೊಂಡು ಬಂದರು. ಆವತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ನಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಪ್ರಮೋಶನ್ ಕೊಡುವಾಗ ಬೇರೆ ಬೇರೆ ಸಮಾಜದವರಿಗೆ ಅಥವಾ ಸವರ್ಣೀಯರಿಗೆ ಎಂದು ಹೇಳೋಣ. ಸೀನಿಯಾರಿಟಿ ಮೇಲೆ ಕೊಟ್ಟರೆ ಈ ವರ್ಗಕ್ಕೆ ಏನೊಂದು ಹುದ್ದೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇರಲಿಲ್ಲ, ಆದಕ್ಕೋಸ್ಕರ ಐದು ವರ್ಷ ಮಿನಿಮಮ್ ಸರ್ವೀಸ್ ಇದ್ದರೆ ಮಾತ್ರ ಕೊಡಬೇಕೆಂದು ತೀರ್ಮಾನ ಮಾಡಿದರು. ೭೮ರಿಂದ ೮೨ರ ವರೆಗೆ ಇದು ಜಾರಿಯಲ್ಲಿತ್ತು. ೮೩ರಲ್ಲಿ ಪ್ರಮೋಶನ್ ಕೊಡಬೇಕೆಂದು ಹೊರಟಾಗ ಪಟ್ಟಿಯೊಳಗೆ ಪರಿಶಿಷ್ಟ ವರ್ಗದವರು ಯಾರೂ ಇದ್ದಿರಲಿಲ್ಲ. ೭೮ರಿಂದ ೮೨ರವರೆಗೆ ಕೊಟ್ಟರು ಮತ್ತು ೫ ವರ್ಷ ಮಿನಿಮಮ್ ಸರ್ವೀಸ್ ಇರಬೇಕೆಂದು ಮಾಡಿದರು. ಅದನ್ನು ಜಾರಿಗೆ ಕೊಟ್ಟರು. ೮೩ರಲ್ಲಿ ತಾವು ಶ್ರೀ ಗುಂಡೂರಾಯರ ಸರ್ಕಾರದಲ್ಲಿ ಮಂತ್ರಿಯಾಗಿದ್ದೀರಿ, ಆಗ ಒಂದು ತೀರ್ಮಾನ ಆಯಿತು ಆಗ ೨೨ ಜನಕ್ಕೋ ೨೪ ಜನಕ್ಕೋ ಪ್ರಮೋಶನ್ ಕೊಡಬೇಕು ಎನ್ನುವಾಗ ಒಬ್ಬ ಪರಿಶಿಷ್ಟ ಸಮಾಜದವರೂ ಅದರಲ್ಲಿ ಬರದೇ ಹೋದ ಕಾರಣದಿಂದ ಒನ್‌ಟೈಮ್ ಆದರೂ ಕನ್ಸೇಶನ್ ಕೊಡಬೇಕೆಂದು ಕ್ಯಾಬಿನೆಟ್ ರೆಸಲ್ಯೂಶನ್ ಮಾಡಿ ಆ ಒಂದು ಸಾರಿ ಪ್ರಮೋಶನ್ ಲಿಸ್ಟ್ ಅನ್ನು ಎಫೆಕ್ಟ್‌ಗೆ ಕೊಡಬೇಕಾದರೆ ಮೂರು ವರ್ಷಕ್ಕೆ ಇಳಿಸಿ ಎರಡು ಜನಕ್ಕೋ ಮೂರು ಜನಕ್ಕೋ ಅದರಲ್ಲಿ ತರುವುದಕ್ಕೆ ಅವಕಾಶ ಮಾಡಿಕೊಡಲಾಯಿತು. ಅದು ಬಿಟ್ಟು ಮತ್ತೇನೂ ಮಾಡಿಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಇದಾದಮೇಲೆ ಎರಡು ಸಲ ಕನ್ಸೇಶನ್ ನಾವು ಕೊಟ್ಟಿದ್ದೇವೆ ನೀವು ಏನು ಮಾಡಿದಿರಿ ಅದನ್ನೇ ಮುಂದುವರೆಸಿಕೊಂಡು ೧೨ ಜನ ಅಥವಾ ೧೦ ಜನ ಅಧಿಕಾರಿಗಳಿಗೆ ಮೂರು ವರ್ಷ ಇಟ್ಟುಕೊಂಡು ಕೊಟ್ಟಿದ್ದೇವೆ ಅದಾದಮೇಲೆ ಪುನಃ ಕೇಡರ್ ಅಂಡ್‌ರಿಕ್ರೂಟ್‌ಮೆಂಟ್ ರೂಲ್ಸ್ ಹಿಂದೆ ೫ ವರ್ಷಕ್ಕೆ ಎಂದು ಏನು ದೇವರಾಜ ಅರಸ್ ಅವರ ಕಾಲಕ್ಕೆ ಇಟ್ಟಿದ್ದರೋ ಅದು ಮಾರ್ಪಾಡು ಆಗಿದೆ.